ಅಪರಂಜಿ

ಏಪ್ರಿಲ್ 2000

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವು

ದಾಶರಥಿ ದೀಕ್ಷಿತ್

ಶ್ರೀಮತಿ ಅರುಣಾ ಆರ್. ಕಾರಂತ್

ಎಂ.ಎಸ್.ಕೆ.

ಆನಂದ

ವೈ.ವಿ. ಗುಂಡೂರಾವ್

ಮಲ್ಲಿಕಾರ್ಜುನ ಹುಲಗಬಾಳಿ

ನಾಗೂಶ್ರೀ ಸೂರಿ

ಕೃಷ್ಣ ಸುಬ್ಬರಾವ್

ಶ್ರೀನಿವಾಸ ವೈದ್ಯ (ಶೀನೂ)

ರಾಮಿ

ಈರಪ್ಪ ಎಂ. ಕಂಬಳಿ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 17 ಏಪ್ರಿಲ್ - 2000 ಸಂಚಿಕೆ -7

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 17 ಏಪ್ರಿಲ್- 2000 ಸಂಚಿಕೆ -7

ಸರಳ ಸಾಂಗೋಪಾಂಗ ಮಂತ್ರೋಚ್ಚರಣ ಸಂಹೃತಿ ಮೋಕ್ಷವನು ವಿಸ್ತರಿಸುತ ರಹಸ್ಯದಲಿ ಕೊಟ್ಟನು ಪಾಶುಪತಶರವ

- ಕುಮಾರವ್ಯಾಸ

ಪ್ರಪಂಚ ಸಂಕೋಚಗೊಂಡು ಹಳ್ಳಿಯಾಗುತ್ತಿದೆ. ಇದಕ್ಕೆ ಗೌಡರು, ಛೇರ್ಮನ್ನರು, ಶಾನುಭೋಗರು, ಗೊಂಚಕಾರರು ಹುಟ್ಟಿಕೊಂಡಿದ್ದಾರೆ. ವಿಜ್ಞಾನಿಗಳು ಇವರಿಗೆ ತಳವಾರರು. ಈ ಸ್ವಯಂ ಘೋಷಿತ ಮುಖಂಡರಿಗೆ ತಮಟೆ ಬಡಿಯುವವರು ಯಾರು - ಗೊತ್ತೇ ಇದೆಯಲ್ಲಾ. ಹೇಳಿ ಏಕೆ ನಿಷ್ಠುರವಾಗಬೇಕು?

ವಿಜ್ಞಾನಿಗಳು 1980ರಲ್ಲೇ ಅಮಾನತು ಹೊಂದಬೇಕೆಂದು ಅಥವಾ ಹೊಂದಿಸಿಬಿಟ್ಟಿರುತ್ತಾರೆಂದು ಹೇಳಿದ ಷಾನ ಮಾತು ಸುಳ್ಳಾಯಿತು.

ವಿಜ್ಞಾನಿಗಳು ಧೀಮಂತರು. ಆದರೆ ಅವರು ಹಣ ಕೊಡುವವರು ಹೇಳಿದುದನ್ನು ಕೇಳಬೇಕಾಗುತ್ತದೆ ಅಷ್ಟೇ. ಹಿಂದೆ ಬಾಹ್ಯಾಕಾಶವಾಯಿತು ಈಗ ಐ.ಟಿ.

ಕೆಳಬಿದ್ದ ನಾಯಿಗಳನ್ನು ಉಳಿಸಿಕೊಳ್ಳಲು ಕೆಲಸ ಮಾಡಿದರೆ ಸರಿ. ಆದರೀಗ ಫಾಸ್ಟ್ ರಿಸಲ್ಟ್ಸ್ ಕಾಲ ಯಾವನೋ ಉದ್ಯಮಿಗೆ ಹಣ ಒದಗಿಸಿಕೊಡಲು ತಂತ್ರಜ್ಞಾನಿಗಳು ಮುಗದಾಣಕಟ್ಟಿದ ಎತ್ತುಗಳಾಗುತ್ತಾರೆ. ಸಂಹಾರ ಕಾರ್ಯದಲ್ಲಿ ನಿಪುಣರು, ಉಪಸಂಹಾರ ಗೊತ್ತಿಲ್ಲ.

ಅಣ್ವಸ್ತ್ರಗಳನ್ನು ಪಾಶುಪತ, ನಾರಾಯಣ ಮೊದಲಾದ ಅಸ್ತ್ರಗಳಿಗೆ ಹೋಲಿಸುತ್ತಿದ್ದಾರೆ. ಆದರೆ ಮಂತ್ರಾಸ್ತ್ರಗಳನ್ನು ಬಿಟ್ಟಮೇಲು ಉಪಸಂಹರಿಸುತ್ತಿದ್ದರು. ಈಗ? ಏನೆನ್ನುತ್ತಾರೆ ವಿಜ್ಞಾನಿಗಳು? ನಮ್ಮ ಕೆಲಸ ನಾವು ಮಾಡಿದ್ದಾಯಿತು, ಪರಿಣಾಮಗಳಿಗೆ ಜವಾಬ್ದಾರರಲ್ಲ. ಇವರನ್ನು ವಿಜ್ಞಾನಿಗಳೆಂದು ಕರೆಯುವುದೇ ತಪ್ಪು, ಇವರು ಕೇವಲ ಸೈಂಟಿಸ್ಟುಗಳು (ಜೈ ಕನ್ನಡ)

ಪಾಶುಪತಾಸ್ತ್ರದ ಎಲ್ಲ ರಹಸ್ಯಗಳನ್ನೂ ಶಿವ ಅರ್ಜುನನಿಗೆ ಕೊಟ್ಟನಂತೆ. ಅದರಲ್ಲಿ ಉಪ ಸಂಹಾರವೂ ಸೇರಿತ್ತು. ಈಗ ಗುಂಡಿಯೊತ್ತಿದರಾಯ್ತು. ಎಲ್ಲಿಯ ಉಪಸಂಹಾರ?

ಆದರೂ ಅರ್ಜುನನಿಗೆ ಅಸ್ತ್ರದ ಒಂದಾನೊಂದು ಮುಖ್ಯ ರಹಸ್ಯವನ್ನು ತಿಳಿಸಿರಲಿಲ್ಲ. ಸೈಂಧವ ವಧೆಯ ಹಿಂದಿನ ರಾತ್ರಿ ಕೃಷ್ಣನ ಬೇಡಿಕೆಯಂತೆ ಅರ್ಜುನನಿಗೆ ಹೇಳಿಕೊಟ್ಟನಂತೆ. ಇದು ಧರ್ಮ ನಿರಪೇಕ್ಷರಾಜ್ಯ. ಧರ್ಮ ಎಂದರೇನು?

'ಸಕಲ ಸಚರಾಚರದೊಳಗೆ ನೀನು ಉತ್ತಮಾಧಮವೆನ್ನದೇ ಕಾಣುತ್ತ ಹರುಷ ವಿಷಾದದಲಿ ಮುಳುಗುತ್ತಿರದೆ ಸಮರಸದೊಳಿಹುದು' ಧರ್ಮ, ಪರತತ್ವ, ಸಕಲ ಲೋಕಗಳಿಗೂ ಅಪರಂಜಿಯಿಂದ ಯುಗಾದಿಯ ಶುಭಾಶಯಗಳು.



○ ಪ್ರಕಾಶ್

ಕಂಪ್ಯೂಟರ್ ಬಿಡಿಭಾಗ, ಸೆಲ್‌ಫೋನ್ ಅಗ್ಗ

- ಬಜೆಟ್ ಸುದ್ದಿ

ಹೊಟ್ಟೆಗೆ ಹಿಟ್ಟಿಲ್ಲ..... !!

★★★

ದಕ್ಷಿಣ ಆಫ್ರಿಕಾ ಕ್ರಿಕೆಟ್ ಪಂದ್ಯ; ಬಿಗಿ ಭದ್ರತೆ

- ಸುದ್ದಿ

ಅದಕ್ಕೇ ಏನೋ ಮೂರೇ ದಿನದಲ್ಲಿ ಪಂದ್ಯ ಮುಗಿಸುತ್ತಾರಂತೆ!!

★★★

ಕ್ಲಿಂಟನ್ ಭೇಟಿ; ನಗರವನ್ನು ಸ್ವಚ್ಛವಾಗಿಡಿ

- ಮಾನ್ಯ ಮೇಯರ್

ಕ್ಲಿಂಟನ್ ಬೆಂಗಳೂರಿನಲ್ಲೇ ನೆಲೆಸಿದರೆ ಸಮಸ್ಯೆ ಪರಿಹಾರ!!

★★★

ಜಯದೇವ ಆಸ್ಪತ್ರೆ ತೀವ್ರ ವಿವಾದ

- ಸುದ್ದಿ

ಹೃದಯ ವಿದ್ರಾವಕ ಸುದ್ದಿ!!

★★★

ಒಂದೂವರೆ ಕೋಟಿ ಆಸ್ತಿ ಮಾಡಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ

- ಪತ್ರಿಕೆ

ಅವರು ತಮ್ಮ ಅಭಿವೃದ್ಧಿಯಲ್ಲೇ ನಿರತರಾಗಿದ್ದರು

★★★

ಭಾರತದ ಆರ್ಥಿಕ ಸುಧಾರಣೆಗಳಿಗೆ ಯೂರೋಪ್ ಒಕ್ಕೂಟ ಶ್ಲಾಘನೆ

- ಸುದ್ದಿ

ಅರ್ಥ ಮಂತ್ರಿಗಳು ಚಕಿತರಾದರಂತೆ!!

★★★

ಜೇಮ್ಸ್ ಬಾಂಡ್ ಚಿತ್ರದ ಫಿಲಂ ಅಪಹರಣ

- ಸುದ್ದಿ !!

ಅದನ್ನ ಹುಡುಕಲು ಅವನನ್ನೇ ಕರೆಸುತ್ತಾರಂತೆ!!

★★★

ಜಾಗೃತ ಆಯೋಗದ ವೆಬ್‌ಸೈಟಿನಲ್ಲಿ ಎಲ್ಲಾ ಭ್ರಷ್ಟರ ಹೆಸರು

- ಶ್ರೀ ವಿಟ್ಠಲ್

ಜಗತ್ತಿನ ಅತಿದೊಡ್ಡ ವೆಬ್‌ಸೈಟ್ ಅಂತ
ಗಿನ್ನಿಸ್ ಬುಕ್ಕಿನವರು ಕಾಯುತ್ತಿದ್ದಾರಂತೆ!!

★★★

ಅಧಿಕ ಹೊಗೆ ಉಗುಳುವ ವಾಹನಕ್ಕೆ ನಗರ ಪ್ರವೇಶ ನಿಷೇಧ

- ಸುದ್ದಿ

ಇನ್ನು ರಸ್ತೆಗಳೆಲ್ಲ ಖಾಲಿ!!

★★★

ತಾಳಿದವನು ಬಾಳಿಯಾನು

– ಶಿವು

ಬೆಳಗ್ಗೆ ಹತ್ತೂವರೆ ಸಮಯ. ಫ್ಯಾಕ್ಟರಿಯಲ್ಲಿ ಕೂತಿದ್ದೆ. ತಲೆತುಂಬಾ ಸಾವಿರ ತಾಪತ್ರಯಗಳು. ಮೊನ್ನೆ ಸರಬರಾಜಾಗಬೇಕಾಗಿದ್ದ ಸಾಮಗ್ರಿ ಇನ್ನೂ ತಯಾರೇ ಆಗಿರಲಿಲ್ಲ. ಇದರ ಮಧ್ಯೆ ಪವರ್ ಷಟ್ ಡೌನ್ ಬೇರೆ. ಸಾಲದ್ದಕ್ಕೆ ಬೆಳಗಾಗೆದ್ದು ಮೂರು ಜನ ಕೆಲಸಗಾರರು ''ನಾಳೆ ಪಿತೃಪಕ್ಷ ಸಾರ್. ಸ್ವಲ್ಪ ಅಡ್ವಾನ್ಸ್ ಬೇಕು'' ಅಂತ ಆದೇಶ ನೀಡಿ ಹೋಗಿದ್ದರು. ಸ್ವಲ್ಪ ಕೂಲ್ ಡೌನ್ ಆಗೋಣ ಅಂತ ''ಎಕನಾಮಿಕ್ಸ್ ಟೈಮ್ಸ್'' ಅನ್ನು ಕೈಯಲ್ಲಿ ಹಿಡಿದು, ಫ್ಯಾನ್ ಸ್ವಿಚ್ ಆನ್ ಮಾಡಿದೆ. ಪವರ್ ಷಟ್ ಡೌನ್ ಮರೆತುಹೋಗಿತ್ತು. ''ಥತ್'' ಎನ್ನುತ್ತಾ ಜೋಬಿನಿಂದ ಕರ್ಚೀಫ್ ತೆಗೆದು ಮುಖ ಒರೆಸಿಕೊಳ್ಳುತ್ತಿದ್ದಾಗ ಒಬ್ಬ ಸರ್ದಾರ್ಜಿ ಒಳಕ್ಕೆ ಬಂದ. ಆಡರಿ ಎತ್ತರ, ಹೊರವಾದ ಗಡ್ಡ ಮೀಸೆ, ಬಲಕೈಗೆ ಉಕ್ಕಿನ ಕಡಗ, ಎಡಗೈನಲ್ಲಿ ಒಂದು ಧಡೂತಿ ಸೂಟ್‌ಕೇಸ್.

"I Chadighar come. Beautiful gift articles sell. can show?' ಅಂತ ಹರಕು ಮುರುಕು ಇಂಗ್ಲೀಷಿನಲ್ಲಿ ಕೇಳಿದ. ಅವನ ಕಷ್ಟ ನೋಡಲಾರದೆ ನಾನು

''ಮಾಫ್ ಕೀಜಿಯೇ, ಆಜ್ ಕಲ್ ಮೈ ಬಹುತ್ ಬಿಜಿ ಹ್ಞೂ, ಅಬ್ ಸಮಯ್ ನಹೀ ಹೈ, ಮುಝೆ ಡಿಸ್ಟರ್ಬ್ ಮತ್ ಕೀಜಿಯೇ'' ಅಂತ ಸ್ವಲ್ಪ ಒರಟಾಗಿಯೇ ಹೇಳಿದೆ. (ಮುಂದಿನ ಸಂಭಾಷಣೆಯೆಲ್ಲಾ ಹಿಂದಿಯಲ್ಲೇ ನಡೆಯಿತು) ಆತ, ಎಲ್ಲ ಸೇಲ್ಸ್‌ಮನ್‌ಗಳಂತೆ ಅಲ್ಲೇ ನಿಂತು ನನ್ನನ್ನ ಪೀಡಿಸಲಿಲ್ಲ. ಒಂದೆರಡು ಕ್ಷಣ ನನ್ನನ್ನೇ ದಿಟ್ಟಿಸಿ ನೋಡಿ, ಒಂದು ತರಹಾ ಮುಗುಳ್ನಗೆ ನಕ್ಕು ಬಾಗಿಲತ್ತ ಹೊರಡಲು ಪ್ರಾರಂಭಿಸಿದ. ಅವನ ನಗು ನೋಡಿ ನನಗೆ ಕುತೂಹಲ ಮೂಡಿತು. ''ಯಾಕೆ ಆ ನಗು?'' ಅಂತ ಕೇಳಿದೆ. ''ಯಾವುದೋ ಒಂದು ಹಳೆಯ ಜಪಾನೀ ಕಥೆ ನೆನಪಿಗೆ ಬಂದು ನಗು ಬಂತು'' ಅಂದ ಆ ಸರ್ದಾರ್ಜಿ.

''ಕೂತುಕೋ, ಅದೇನದು ಆ ಜಪಾನೀ ಕಥೆ?'' ಮುಂದಿನ ಸಂಚಿಕೆಗೆ ಸದಾ ಗ್ರಾಸ ಹುಡುಕುತ್ತಿದ್ದ ನನಗೆ ಇದೊಂದು ಸದವಕಾಶ ಅನ್ನಿಸಿತು. ಸರ್ದಾರ್ಜಿ ತನ್ನಕೈಲಿದ್ದ ಸೂಟ್ ಕೇಸನ್ನು ವಾರಣವಾಗಿ ಗೋಡೆ ಬದಿಯಲ್ಲಿಟ್ಟು ಸಾವಧಾನವಾಗಿ ಕುರ್ಚಿಯ ಮೇಲೆ ಬಂದು ಕುಳಿತು ತನ್ನ ಕಥೆಯನ್ನು ಪ್ರಾರಂಭಿಸಿದ.

''ಒಬ್ಬ ರೈತ ಮತ್ತು ಅವನ ಮಗ ಒಂದು ಹಳ್ಳಿಯಲ್ಲಿ ಉತ್ತು ಬಿತ್ತು ಜೀವನ ಸಾಗಿಸುತ್ತಿದ್ದರಂತೆ. ರೈತ ಬಲು ನಿಧಾನಸ್ಥ. ಮಗನದ್ದೋ ಬಲು ಆತುರದ

ಸ್ವಭಾವ. ಒಂದು ದಿನ ಬೆಳಗ್ಗೆ ತಂದೆ, ಮಗ ತಾವು ಬೆಳೆದ ತರಕಾರಿಯನ್ನೆಲ್ಲಾ ಒಂದು ಎತ್ತಿನ ಬಂಡಿಗೆ ಹೇರಿ ಹತ್ತಿರದ ಪಟ್ಟಣದಲ್ಲಿ ಮಾರಲು ಹೊರಟರಂತೆ. ಒಂದು ದಿನ ಹಾಗೂ ಒಂದು ರಾತ್ರಿ ಬಿಡುವಿಲ್ಲದೇ ಬಂಡಿ ಓಡಿಸಿದರೆ ಮಾರನೆ ಮುಂಜಾನೆ ಪಟ್ಟಣ ಸೇರಿ ಎಲ್ಲರಿಗಿಂತ ಮುಂಚೆ ತಮ್ಮ ಸರಕನ್ನೆಲ್ಲಾ ಮಾರಿಬಿಡಬಹುದೆಂದು ಮಗನ ಅಂದಾಜು. ಹಾಗಾಗಿ ಗಾಡಿಯನ್ನು ಜೋರಾಗಿ ಓಡಿಸಲು ಶುರು ಮಾಡಿದ. ಅಪ್ಪ, ''ಯಾಕೋ ಮಗು ಇಷ್ಟು ಅವಸರ, ಊರು ಎಲ್ಲಿ ಓಡಿಹೋಗುತ್ತೆ. ಗಾಡಿ ನಿಧಾನವಾಗಿ ನಡೆಸು. ಎತ್ತಿಗೂ ಆಯಾಸ ಆಗುಲ್ಲ.'' ಅಂತ ಹೇಳಿಕೊಂಡೇ ಬಂದನಂತೆ. ಮಗ ಕೇಳಬೇಕಲ್ಲ. ''ಬೆಳಗಿನ ಜಾವ ಪಟ್ಟಣ ಸೇರಿದರೆ ಪೂರ್ತಿ ಬಂಡಿ ತರಕಾರಿನ ಒಂದೇ ಲಾಟ್‌ನಲ್ಲಿ ಮಾರಿಬಿಡಬಹುದು. ಒಳ್ಳೇ ಬೆಲೇನೂ ಸಿಗುತ್ತೆ ಬೇಗ ಪಟ್ಟಣ ಸೇರೋಣ.'' ಅಂತ ಹೇಳಿಕೊಂಡು ಮಗ ಗಾಡಿ ಓಡಿಸ್ತಾನೇ ಇದ್ದ. ಅಪ್ಪ, ತಲೇ ಮೇಲಿನ ಹ್ಯಾಟನ್ನು ಕಣ್ಣಿನ ಮುಂದೆ ಎಳೆದು ಗಾಡಿಯಲ್ಲೇ ತೂಕಡಿಸಲು ಶುರು ಮಾಡಿದ.

ನಾಲ್ಕು ತಾಸಿನ ಪ್ರಯಾಣ ಆದಮೇಲೆ ಒಂದು ಸಣ್ಣ ಮನೆ ಕಣ್ಣಿಗೆ ಬಿತ್ತು. ''ಇದು ನಿನ್ನ ಚಿಕ್ಕಪ್ಪನ ಮನೆ, ಸ್ವಲ್ಪ ನಿಲ್ಲಿಸು. ಅವನು ಹೇಗಿದ್ದಾನೋ ನೋಡಿ ಬರೋಣ'' ಎನ್ನುತ್ತಾ ಅಪ್ಪ ಗಾಡಿಯಿಂದ ಇಳಿದ. ಮನಸ್ಸಿನಲ್ಲಿ ತೀವ್ರ ಅಸಮಾಧಾನವಿದ್ದರೂ, ಅಪ್ಪನಿಗೋಸ್ಕರ ಮಗ ಗಾಡಿ ನಿಲ್ಲಿಸಿ ತಾನೂ ಇಳಿದ, ಹಿರಿಯರಿಬ್ಬರು ಸಾವಧಾನವಾಗಿ ಹರಟೆ ಹೊಡೆದು, ಟೀ ಕುಡಿದು, ಅಪ್ಪ ಗಾಡಿ ಹತ್ತಿದಾಗ ಸೂರ್ಯ ನೆತ್ತಿಗೆ ಬಂದಿದ್ದ. ಅಪ್ಪ, ಮಗ ಪುನಃ ಗಾಡಿಯ ಬಳಿ ಬಂದಾಗ ಅಪ್ಪ ''ಮಗೂ, ನಿನಗೆ ದಣಿವಾಗಿರಬಹುದು. ನಾನು ಹೊಡೀತೇನೆ ಗಾಡೀನ'' ಎನ್ನುತ್ತಾ ಚಾಟಿಯನ್ನ ಕೈಗೆ ತೆಗೆದುಕೊಂಡ. ಸ್ವಲ್ಪ ದೂರ ದಾರಿ ಸಾಗಿದ ಮೇಲೆ ರಸ್ತೆಯಲ್ಲೊಂದು ಕವಲು ಕಾಣಿಸಿತು. ಅಪ್ಪ ಗಾಡಿಯನ್ನು ಬಲಕ್ಕೆ ತಿರುಗಿಸಿದ. ''ಎಡದ ಕವಲಿನಲ್ಲಿ ಹೋದರೆ ಪಟ್ಟಣದ ಹಾದಿ ಹತ್ತಿರ'' ಅಂತ ಮಗ ಚಡಪಡಿಸಿದ. ''ಅದು ನನಗೆ ಗೊತ್ತು ಮಗು. ಆದರೆ ಈ ಹಾದಿ ಹಂಸಗಳ ಕೊಳವನ್ನು ಬಳಸಿ ಹೋಗುತ್ತೆ'' ಅಂದ ಅಪ್ಪ.

''ನಿನಗೆ ಸಮಯದ ಬಗ್ಗೆ ಗೌರವಾನೇ ಇಲ್ಲವೇ?'' ಮಗ ಕೇಳಿದ.

''ಇದೆ ಮಗು. ಬಹಳ ಗೌರವ ಇದೆ. ಅದಕ್ಕೆ ಹಂಸಗಳನ್ನು ನೋಡಲು ಆ ಸಮಯವನ್ನು ಬಳಸುತ್ತೇನೆ'' ಅಂದ ಆ ಹಿರಿಯ. ಸಂಜೆ ಹೊತ್ತಿಗೆ ನಮ್ಮ ಯಾತ್ರಿಕರು ಹಂಸಗಳ ಕೊಳವನ್ನು ಸೇರಿದರು. ಕೊಳದಲ್ಲಿನ ಜೊಂಡುಗಳ ನಡುವೆ ಕಣ್ಣುಮುಚ್ಚಾಲೆಯಾಡುತ್ತಿದ್ದ ಹಂಸಗಳ ಹಿಂಡು ನಿಜಕ್ಕೂ ಮನಮೋಹಕವಾಗಿತ್ತು.

''ಮಗು, ಎತ್ತನ್ನು ಗಾಡಿಯಿಂದ ಬಿಚ್ಚು. ಬುತ್ತಿ ತಿಂದು ಇಲ್ಲಿಯೇ ರಾತ್ರಿ ವಿಶ್ರಮಿಸೋಣ'' ಎನ್ನುತ್ತಾ ಅಪ್ಪ ಕೊಳದ ತಡಿಯಲ್ಲಿ ಕುಳಿತು, ಕಾಲುಗಳನ್ನು ಕೊಳದ ನೀರಿನಲ್ಲಿ ಇಳಿಯಬಿಟ್ಟ.

''ನಿನ್ನ ಜೊತೆಯಲ್ಲಿ ಇದೇ ಕಡೆಯ ಬಾರಿ ನಾನು ಪ್ರಯಾಣ ಮಾಡೋದು. ತರಕಾರಿ ಮಾರಿ ದುಡ್ಡು ಗಳಿಸೋದಕ್ಕಿಂತ ಹಂಸಗಳನ್ನ ನೋಡೋದೇ ಮುಖ್ಯ ಆಯ್ತು ನಿನಗೆ'' ಅಂತ ಗೊಣಗುತ್ತಾ ಮಗ ಎತ್ತನ್ನ ಬಿಚ್ಚಿದ.

ಬೆಳಗ್ಗೆ ಸೂರ್ಯ ಹುಟ್ಟುಕ್ಕೆ ಮುಂಚೇನೆ ಮಗ ಅಪ್ಪನನ್ನ ಎಬ್ಬಿಸಿ ಗಾಡಿ ಹೂಡಿದ. ಒಂದು ಮೈಲಿ ಸಾಗಿದ ನಂತರ, ದಾರಿಯ ಬದಿಯಲ್ಲಿ ರೈತನೊಬ್ಬನ ಬಂಡಿಯ ಚಕ್ರ ಕೆಸರಿನಲ್ಲಿ ಹೂತು ಹೋಗಿದ್ದು ಕಣ್ಣಿಗೆ ಬಿತ್ತು.

''ಪಾಪ, ಗಾಡಿ ಕೆಸರಿನಲ್ಲಿ ಸಿಕ್ಕಿದೆ. ಬಾ, ಅವನಿಗೆ ಸಹಾಯ ಮಾಡೋಣ'' ಎನ್ನುತ್ತಾ ಅಪ್ಪ ಗಾಡಿಯಿಂದ ಇಳಿದ.

''ಇಷ್ಟು ಹೊತ್ತಿಗಾಗಲೇ ನಾವು ಪಟ್ಟಣದಲ್ಲಿರಬೇಕಾಗಿತ್ತು. ಈಗ ಇನ್ನೂ ತಡ ಆಗುತ್ತೆ''

''ಸಮಾಧಾನ ಮಾಡ್ಕೊಳ್ಳೋ, ಮುಂದೆ ನಿನಗೇ ಇಂತಹ ಪರಿಸ್ಥಿತಿ ಬಂದರೆ ಸಹಾಯ ಬೇಕಾಗುಲ್ವೇ'' ಅಂದ ಅಪ್ಪ. ಕೆಸರಿನಲ್ಲಿ ಹೂತ ಗಾಡಿಯನ್ನು ಮೇಲಕ್ಕೆತ್ತಿ ಹೊರತರುವ ಹೊತ್ತಿಗೆ ಬೆಳಗ್ಗೆ ಎಂಟು ಘಂಟೆ ಆಗಿತ್ತು. ಒಮ್ಮಲೇ ಒಂದು ದೊಡ್ಡ ಮಿಂಚು ಆಕಾಶವನ್ನು ಕೋರೈಸಿತು. ಅದರೊಟ್ಟಿಗೇ ಗುಡುಗು. ಗುಡ್ಡದ ಆಚೆ ಬದಿಯ ಆಗಸದಲ್ಲಿ ಕಪ್ಪು ಮೋಡ ತುಂಬಿತು.

''ಓಹೋ, ಪಟ್ಟಣದಲ್ಲಿ ಭಾರಿ ಮಳೆ ಬರೋಹಾಗಿದೆ'' ಅಂದ ಅಪ್ಪ.

''ಎಲ್ಲ ನಿನ್ನಿಂದಾನೇ ಹಾಳಾಯ್ತು. ಬೇಗ ಪಟ್ಟಣ ಸೇರಿದ್ರೆ ಇಷ್ಟು ಹೊತ್ತಿಗಾಗಲೇ ಹಳ್ಳಿ ದಾರಿ ಹಿಡಿದಿರುತ್ತಿದ್ವಿ'' ಎಂದು ಮಗ ಗೊಣಗಿದ.

''ಅವಸರ ಮಾಡ್ಕೊಬೇಡ್ವೋ, ತಾಳಿದವನು ಬಾಳಿಯಾನು''

ಮಧ್ಯಾಹ್ನದ ಹೊತ್ತಿಗೆ ಅಪ್ಪ, ಮಗ ಗುಡ್ಡದ ನೆತ್ತಿ ಸೇರಿದ್ದರು. ಅವರು ಸೇರಬೇಕಾಗಿದ್ದ ಪಟ್ಟಣ ಗುಡ್ಡದ ಬುಡದಲ್ಲಿತ್ತು. ಗುಡ್ಡದ ಮೇಲಿನಿಂದ ಇಡೀ ಪಟ್ಟಣದ ವಿಹಂಗಮ ನೋಟ ಕಾಣುತ್ತಿತ್ತು. ಅಪ್ಪ, ಮಗ ತಮ್ಮ ಕಣ್ಣ ಮುಂದಿದ್ದ ದೃಶ್ಯವನ್ನು ಬಹು ವೇಳೆ ಮೂಕರಾಗಿ ನೋಡಿದರು. ಕೊನೆಗೆ ಮಗ ಹೇಳಿದ ''ಅಪ್ಪ, ನಿನ್ನ ಮಾತು ಈಗ ಅರ್ಥ ಆಯಿತು. ಬಾ, ಹಳ್ಳಿಗೆ ಹಿಂತಿರುಗೋಣ'' ಎನ್ನುತ್ತಾ ದಾರಿ ಬದಿಯಲ್ಲಿದ್ದ ಕೈಮರಕ್ಕೆ ಒರಗಿಸಿಟ್ಟಿದ್ದ ಚಾಟಿಯನ್ನು ಕೈಗೆ ತೆಗೆದುಕೊಂಡ. ಗಾಡಿ ಹಿಂತಿರುಗುತ್ತಿದ್ದಂತೆ ಅಪ್ಪ ಕೈಮರದ ಕಡೆ ದೃಷ್ಟಿ ಹಾಯಿಸಿದ. ''ಹಿರೋಷಿಮಾ - 2 ಮೈಲಿ'' ಎಂದು ಕಾಂಜಿ ಲಿಪಿಯಲ್ಲಿತ್ತು ಆ ಫಲಕ.

ಸರ್ದಾರ್ಜಿ ಕಥೆ ಕೇಳಿದ ಮೇಲೆ ಅವನಿಂದ ಒಂದು ವರ್ಣರಂಜಿತ ಪ್ಲಾಸ್ಟಿಕ್ ಪೆನ್ ಹೋಲ್ಡರ್ ಕೊಂಡೆ. ಈಗಲೂ ಅದು ನನ್ನ ಮೇಜಿನ ಮೇಲಿದೆ. ಅದನ್ನು ನೋಡಿದಾಗಲೆಲ್ಲಾ ಆ ಗಡ್ಡ ಮೀಸೆಯ ಮುಗುಳ್ನಗೆ ನೆನಪಿಗೆ ಬರುತ್ತದೆ

ಭೀಮನ ಅಮಾವಾಸ್ಯೆ

– ದಾಶರಥಿ ದೀಕ್ಷಿತ್

''ಹೌದು ಭೀಮಕ್ಕ ನನಗೆ ಚೆನ್ನಾಗಿ ನೆನಪಿದೆ ನೋಡು - ಚಿಕ್ಕವಳಿದ್ದಾಗಿನಿಂದ ನಮ್ಮಮ್ಮ ಬಿಡದೆ ನನ್ನ ಕೈಯಿಂದ ಪ್ರತಿ ವರ್ಷ ಗಂಡನ ಪೂಜೆ ಮಾಡಿಸುತ್ತಿದ್ದಳು. ನಾನು ಶ್ರದ್ಧಾಭಕ್ತಿಯಿಂದ ಜರಿ ಪರಕಾರ ಚಿನ್ನದ ಸರ ಅರಿಶಿನದ ದಾರ ಹಾಕಿಕೊಂಡು ಒಳ್ಳೆ ಗಂಡನನ್ನು ದೊರಕಿಸುವಂತೆ ಆ ಪರಮಾತ್ಮನ ಸ್ವರೂಪನನ್ನು ಪೂಜೆ ಮಾಡ್ತಾ ಇದ್ದೆ.''

''ಅದಕ್ಕೇಮ್ಮ ನಿಮಗೆ ಒಳ್ಳೆ ಯಜಮಾನ್ರು ಸಿಕ್ಕಿದ್ದಾರೆ''

''... ಇಪ್ಪತ್ತು ವರ್ಷದ ಪೂಜೆ ಫಲ ಭೀಮಕ್ಕ ಇದು. ಪ್ರತಿ ಭೀಮನ ಅಮವಾಸ್ಯೆ ದಿನ ತಪ್ಪದೆ ತುಪ್ಪದ ದೀಪ ಹಚ್ಚಿ ಕೈಜೋಡಿಸಿದ್ದರ ಫಲ. ಆದರೆ ನೋಡಿ ನಾನು ಮಂಗಳಾರತಿ ಮಾಡಿದಾಗಲೆಲ್ಲಾ ಈ ಪದ್ಧತಿ ಯಾಕೆ ಭೀಮನ ಅಮಾವಾಸ್ಯೆ ದಿನವೇ ಬಂತೂ ಅಂತ ಯೋಚಿಸಿ - ಗಂಡ ಭೀಮನ ಹಾಗೆ ಇದ್ದಾನೆಯೆ? ಇಲ್ಲ ಅಮಾವಾಸ್ಯೆ ಬಾಬತ್ತೆ? ಇದರ ಅರ್ಥವೇನು ಎನ್ನೋದು ಹಸೆಮೇಲೆ ಕೂತಾಗ ಗೊತ್ತಾಯಿತು ನೋಡಿ - ನಮ್ಮ ಯಜಮಾನ್ರು ಭೀಮನೂ ಹೌದು ಮತ್ತೆ ಅಮಾವಾಸ್ಯೆಯ ಸಮೀಪ ಬಳಗ ಎಂದು...''

''ಈಗ ಅಷ್ಟು ಕಪ್ಪಾಗಿ ಕಾಣೋಲ್ಲವಲ್ಲ?... ಕಾಯುವು ಅಲ್ಪವಾಗಿದೆಯಲ್ಲಾ?...''

''ಆಗದೆ ಏನು ನೀನು ಹೇಳೋದು ಹನ್ನೆರಡು ವರ್ಷ ವನವಾಸ, ಒಂದು ವರ್ಷ ಅಜ್ಞಾತವಾಸ...''

''ಇದೇನು ಹೀಗಂತೀರಿ - ಭಾರತ ಭೀಮನ ಕತೆಯೆ?...''

''ತೋಡಿಕೊಂಡೆನು ಭೀಮಕ್ಕ ಈಗಿನ ಸಂಸಾರವೇ ಧರ್ಮರಾಯನ ಪಟ್ಟಾಭಿಷೇಕ ಕಾಲ... ಭೀಮ ಹಿಡಿಂಬಿ ಜೊತೆಗೆ ಸರಸವಾಡ್ತಾ ವಾಕಿಂಗ್ ಹೋಗ್ತಾ ಇದ್ದ ಕಾಲ....''

''ಅರ್ಥವಾಗಲಿಲ್ಲ ಕೆಂಚಮ್ಮನೋರೆ... ಅರ್ಥವಾಗಲಿಲ್ಲ...''

''.... ಇಪ್ಪತ್ತು ವರ್ಷದ ಹಿಂದಿನ ಕತೆ ಭೀಮಕ್ಕ. ಪ್ರಾಯ ತುಂಬಿದ ಹದಿನೆಂಟು ವರ್ಷದ ನವಯೌವ್ವನ ಯುವತಿ ನಾನು. ಆ ಹದಿನೆಂಟು ವರ್ಷವೂ ಭೀಮನಮಾವಾಸ್ಯೆ ದಿನ ಗಂಡನಪೂಜೆ ಮಾಡಿದ್ದೆ. ಆದರೆ ಪ್ರತಿ ಪೂಜೆಗೂ ನನಗೆ ಎದುರಿಗೆ ನಿಲ್ಲುತ್ತಿದ್ದ ವ್ಯಕ್ತಿ ಎಂದರೆ ಭೀಮ-ಅಮಾವಾಸ್ಯೆ. ಭಯವಾಗೋದು ಭೀಮಕ್ಕ - ಮುರಲೀಧರನ ಸುಂದರಾಕೃತಿಯೋ ಮನ್ಮಥನ ಮನೋಹರ ರೂಪನೋ ಕಣ್ಣುಮುಂದೆ ನಿಲ್ಲಬಾರದೆ? ವರ್ಷಂಪ್ರತಿ ಈ ಭೀಮ-ಅಮಾವಾಸ್ಯೆಯ ರೂಪ ನನ್ನ ಮುಂದೆ ನಿಂತು ನಿಂತು ನನ್ನ ವಯಸ್ಸು ಹದಿನೆಂಟರಿಂದ ಇಪ್ಪತ್ತಕ್ಕೆ ಏರಿತು (ನಿಜವಾದ ವಯಸ್ಸು 20, ಹೇಳುವ ವಯಸ್ಸು ಹದಿನಾರೇ ಇತ್ತು) ನಮ್ಮ ತಂದೆ ಊರೂರು ಕೇರಿ ಕೇರಿ ಅಲೆದರು ನನ್ನ ಬಾಳ ಸಂಗಾತಿಗಾಗಿ ಕಾದರೂ ಚಿಂತೆ ಇಲ್ಲ ಏಸೂಳಾದ ಹುಡುಗ ಸಿಗಲೆಂದು ನನ್ನ ಆಸೆ. ಕಡೆಗೊಂದು ದಿನ ನಮ್ಮ ತಂದೆ ಒಂದು ವರನನ್ನು ಹಿಡಿದು ತಂದರು.''

''ಯಾಕೆ ನಿಲ್ಲಿಸಿಬಿಟ್ಟರಿ ಹೇಳಿ ಕೆಂಚಮ್ಮ ರಮ್ಯವಾದ ಕಾದಂಬರಿ ಇದ್ದಾಗಿದೆ ನೀವು ಹೇಳ್ತಿರೋದು... ಈ ಹುಡುಗನೇ ನಿನ್ನ ಕೈಹಿಡಿದನೆ?''

''... ಅದಕ್ಕೆ ಮಾತು ಹೊರಡದಾಯ್ತು ಭೀಮಕ್ಕ... ಆ ಹುಡುಗ ಇಲ್ಲ ಮಾಡ್ಕೊಳೊಲ್ಲಾಂತ ಹೇಳಿ ಸುಮ್ಮನೆ ಬಂದ ದಾರಿಗೆ ಸುಂಕವಿಲ್ಲದೆ ಹೋಗಬಾರದೆ?... ''ಅಯ್ಯೋ ಈ ಹಿಡಿಂಬಿನ ಕೈ ಹಿಡಿಯೋಕೆ ನಾನು ಭೀಮನಲ್ಲ...'' ಎಂದುಬಿಟ್ಟು ಕರುಳು ಚುರುಕ್ ಎನ್ನಿಸಿದ ಆ ಪಾಪಿ. ಈಗ ಯಾವಳೋ ಗಂಡ ಸತ್ತವಳನ್ನು ಕಟ್ಕೊಂಡು ವಿಧವೋದ್ಧಾರಾಂತ ಅಲೀತಿದಾನೇನ್ನಿ.... ಆದರೂ ಅವನು ಹಾಗನ್ನಬಹುದೋ?... ಆಂ...''

''ಹುಡುಗಾಟ...''

''ಹುಡುಗಾಟವಲ್ಲ ಭೀಮಕ್ಕ ಮೈಯ್ಯೊಳಗಿನ ತಿಮುರು. ತಲೆತಾಕಿರಲಿಲ್ಲ ಆ ಬಿಸಿರಕ್ತಕ್ಕೆ. ಒಂದು ಹೆಣ್ಣು ಜೀವದ ನಿಜ ಸ್ವರೂಪ ಎತ್ತಿ ಎಲ್ಲರಿಗೂ ಕೇಳುವಂತೆ ಹೇಳಿಬಿಟ್ಟ ಅವನು... ಕೂಡಲೆ ನನಗೆ ನೆನಪಿಗೆ ಬಂದದ್ದು ಭೀಮನಮಾವಾಸ್ಯೆ ಭೀಮಕ್ಕ... ನಾನೇನು ಹೇಳಲಿ... ಅದೇ ಆಕೃತಿ ಮುಂದೆ ಬಂದು ನಿಂತ ಹಾಗಾಯಿತು...''

''... ಸರಿ ಆಮೇಲೆ...''

''.... ಆಮೇಲೇನು ನಮ್ಮ ತಂದೆ ಮತ್ತೆ ಹುಡುಕಲು ಪ್ರಾರಂಭ ನನ್ನ ಭೀಮನಿಗಾಗಿ. ಸರಿ ಕಾರ್ತಿಕ ಮಾಸ ಪರಿಹರದಲ್ಲಿ ಸಂತರ್ಪಣೆ ದೇವರ ಗುಡಿಯಲ್ಲಿ, ಎಲೆ ಬಡಿಸಿದ್ದಾಗಿದೆ, ಮಧ್ಯೆ ಕಂಭಕ್ಕೆ ಒರಗಿ ಕುಳಿತ ವ್ಯಕ್ತಿ ಕೇಳಿತಂತೆ ''ತಿಂದಷ್ಟೊ

ಹಾಕಿದಷ್ಟೊ...'' ಎಂದು ದರ್ಪದಿಂದ. ''ತಿಂದಷ್ಟು'' ಎಂದರಂತೆ ಬಡಿಸುವವರು. ಆ ವ್ಯಕ್ತಿ ನಲವತ್ತು ಹೋಳಿಗೆ ಎಂಭತ್ತು ಆಂಬೊಡೆ ಆಮೇಲೆ ಯಥಾವಿಧಿ ಊಟ ಮಾಡಿದ್ದು ನಮ್ಮ ತಂದೆ ಸ್ವತಹ ನೋಡಿದರು. ಅವರನ್ನು ವಿಚಾರಿಸಿದರು. ದೇಶಸ್ಥರು ಲಗ್ನವಿಲ್ಲ ಎಂದು ತಿಳಿಯಿತು. ಹೀಗೆ ಕನ್ಯಾದಾನ ಮಾಡಬೇಕೆಂದಿದ್ದೇನೆ ತಾವು ನನ್ನ ಮಗಳ ಕನ್ಯಾಸೆರೆ ಬಿಡಿಸಬೇಕೆಂದು ಕೇಳಿದರಂತೆ. ನನ್ನ ಎತ್ತರ ನನ್ನ ಊಟ ನನ್ನ ಬಣ್ಣ ಕೇಳಿಕೊಂಡು 'ಹೆಣ್ಣು ನೋಡುವುದು ಬೇಡ; ಮುಂದಿನ ಲಗ್ನ ಮಾಸದಲ್ಲಿ ಲಗ್ನ, ಲಗ್ನವಾದ ಮರುದಿವಸವೇ ನಿಷೇಕ, ನಿಷೇಕವಾದ ಮರು ದಿನ ಊರು ಬಿಡುತ್ತೇವೆ, ಗಂಡಹೆಂಡತಿ' ಎಂದು ಹೇಳಿದರಂತೆ ಅವರು. ಮತ್ತೆ ಅವರನ್ನು ಕದ್ದು ನೋಡಿದ್ದು ಹಸೆಮೇಲೆ ಕೂತಾಗ. ಭೀಮನ ಅಮಾವಾಸ್ಯೆ ತನಕ ಯಾತಕ್ಕೆ ಕಾಯಲಿ ಈಗಲೆ ಪೂಜೆ ಮಾಡಲಾ ಎಂದೆನಿಸಿತು. ನನ್ನ ಪುಣ್ಯನೋಡು ಭೀಮಕ್ಕ ಅವರ ಹೆಸರೂ ಭೀಮಸೇನಾಚಾರ್ರು. ಅವರು ಕಟ್ಟಿಬಿಗಿದ ಜುಟ್ಟು ಅವರ ಭಾರೀಮೀಸೆ... ಎತ್ತರದ ನಿಲುವು ಆಜಾನುಬಾಹುತ್ವ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಭೂಮಕ್ಕೆ ಕೂತಾಗ ನನಗೂ ಅವರಿಗೂ ಪಂದ್ಯ ಬಿದ್ದು ಅವರಿಗಿಂತ ಒಂದೇ ಲಾಡು ಕಡಿಮೆ ತಿಂದೆ ನಾನು ಅರ್ಧವೇ ಆಂಬೊಡೆ ಕಡಿಮೆ ತಿಂದೆ. ಅವರಷ್ಟೇ ಚಿರೋಟಿ ಹೊಡೆದೆ. ನನಗೆ ಕೇಳುವಂತೆ ಶಹಭಾಶ್ ಎಂದು ಹಿಗ್ಗಿದರು ನನ್ನ ಯಜಮಾನರು ನನ್ನ ಊಟ ನೋಡಿ.''

''ಮದುವೆಯಾದ ಕೂಡಲೆ ಅವರ ಜೊತೆಗೆ ಹೊರಟೆಯಾ - ಕೆಂಚಮ್ಮ''

''ಹೊರಟಿದ್ದು ವನವಾಸಕ್ಕೆ ಭೀಮಕ್ಕ ತೌರುಮನೆಗೆ...''

''ವನವಾಸಕ್ಕೆ? ಇದೇನು ಹೀಗಂತಿ ಕೆಂಚು...''

''ಹೌದು. ಅವರ ಮನೆಯೋ - ಧರ್ಮರಾಯ ಅರ್ಜುನ ನಕುಲ ಸಹದೇವ - ಎಲ್ಲರಿಗೂ ಹೆಂಡಂದಿರು, ಎರಡೋ ಮೂರೋ ಮರಿಗಳು - ಪಾಂಡುರಾಜ ಸ್ವರ್ಗಾರೋಹಣ ಪರ್ವ. ಕುಂತಿ ಕಾವಿ ಬಣ್ಣ ಉಟ್ಟು ಹುಡುಗರನ್ನು ಸಾಕಿದಳು. ಕೌರವರೊಡನೆ ಜೂಜಾಡುವ ಬದಲು ಇದ್ದ ನಾಲ್ಕು ಎಕರೆ ಒಂದು ಮನೆಗೆ ಈ ಪಂಚಪಾಂಡವರೂ ಕಿತ್ತಾಡಿದರು. ನಮ್ಮ ಯಜಮಾನರು ನೀವು ನಾಲ್ವರೂ ಒಂದು ತೂಕ ನಾನೇ ಒಂದು ತೂಕ ಎಂದು ಮೂರು ಎಕರೆ ಕಾಲು ಮನೆ ನನಗೆ ಬೇಕು ಎಂದು ಬಡಿದಾಡಿದರು. ಆ ಮುದುಕಿ ಕುಂತಿ ಎಲ್ಲರೂ ಮರಿಗಳೇ ಕಾಣ್ರೊ, ಯಾಕೆ ಕಿತ್ತಾಡ್ತೀರೀಂತ ಕಿರ್ಲಿದ್ರೂ ಯಾರು ಕಿವಿಗೆ ಹಾಕಿಕೋಬೇಕು? ... ಕಡೆಗೆ ಬೈಗಳಿಂದ ಕೈಕೈ ಮಿಲಾಯಿಸಿತು ನನ್ನ ಪ್ರಾಣ ಪ್ರಿಯರು ಸಹದೇವನನ್ನು ಸಡೆಬಡಿದರು - ಅರ್ಜುನನ ಅಂಗಿ ಹರಿದರು, ಧರ್ಮರಾಯನ ದವಡೆ ಗೊದ್ದು, ನನ್ನನ್ನೂ

ಕರೆದುಕೊಂಡು ರೈಲು ಹತ್ತಿಬಿಟ್ಟರು. ಪೂನಾ ಬೊಂಬಾಯಿ - ಕೋಂಡ - ಮನ್ಮಾಡ್ - ಗಯಾ - ಪ್ರಯಾಗ - ಪೂರಿ ಜಗನ್ನಾಥ - ಬೆಜವಾಡ ಮದರಾಸು - ಚಿದಂಬರ ನಟರಾಜ ಎಂದು ಹನ್ನೆರಡು ವರ್ಷ ಸುತ್ತಿಸಿದರು... ಎಲ್ಲೆಲ್ಲಿ ಹೋದರು ಒಂದೊಂದು ಹೋಟಲಲ್ಲದೆ ಬೇರೆ ಎಲ್ಲಿ ಇವರಿಗೆ ಕೆಲಸ ಸಿಗಬೇಕು?... ಇವರ ಹೊಟ್ಟೆಗೆ ನನ್ನ ಹೊಟ್ಟೆಗೆ ಹಾಕಲು ಹೋಟಲುಗಳಿಗೇ ಸಾಧ್ಯ. ಈಚಲಕರಂಜಿಯಲ್ಲಿ ಘಟೋದ್ಗಜ ಹುಟ್ಟಿದ. ಅಲ್ಲಿ ಹೋಟಲಿನವನಿಗೂ ಇವರಿಗೂ ಯಾವುದೋ ವಿಷಯಕ್ಕೆ ಕೈಕೈ ಮಿಲಾಯಿಸಿ ರಾತ್ರಿ ಹನ್ನೆರಡಕ್ಕೆ ಅವನನ್ನು ಸ್ವಾಮಿಪಾದ ಸೇರಿಸಿದರು. ಅವನು ಸೇರಿಸಿಟ್ಟ ಹಣದ ಗಂಟಿನೊಡನೆ ನನ್ನನ್ನೂ ಮಗನನ್ನೂ ಕರೆದೊಯ್ದರು. ಅಲ್ಲಿಂದ ಅಜ್ಞಾತವಾಸಕ್ಕೆ ಪ್ರಾರಂಭ ಭೀಮಕ್ಕ...''

''.... ಎಷ್ಟು ಕಷ್ಟಪಟ್ಟಿದೀಯೆ ಕೆಂಚಮ್ಮ...''

''ಈ ಅಜ್ಞಾತವಾಸದಲ್ಲೇ ನಮ್ಮವರು ಮೀಸೆ ತೆಗಿಸಿ ಕ್ರಾಪು ಬಿಟ್ಟು ಈಚಲ ಕರಂಜಿಯಿಂದ ತಂದ ಗಂಟಿನಿಂದ ಮಿಲಿಟರಿ ಕಂಟ್ರಾಕ್ಟ್ ಪ್ರಾರಂಭಿಸಿದರು, ಅಪ್ಪಟ ಬೆಣ್ಣೆ ಸರಬರಾಜಿಗೆ ನಿಂತರು ನನ್ನ ಪ್ರಾಣಪ್ರಿಯರು. ಮೈದಾ - ಡಾಲ್ಡಾ ನಾದಿ ನಾದಿ ನನ್ನ ಕೈಯೆಲ್ಲಾ ಸೋತು ಹೋಯಿತು. ಆಮೇಲೆ ತುಪ್ಪ ಸಪ್ಲೈಗೆ ನಿಂತರು. ಇನ್ನೂ ಅನುಕೂಲವಾಯಿತು ನಾದುವುದು ತಪ್ಪಿ ಸೀದಾ ಡಾಲ್ಡಾಕ್ಕೆ ಕೊಂಚ ತುಪ್ಪ ಬೆರಸಿ ಸಪ್ಲೈ ಮಾಡಿದರು... ಆಮೇಲೆ ಬಟ್ಟೆ ವ್ಯಾಪಾರಕ್ಕಿಳಿದು ಆಗಲೆ ನೋಡಿ ಈ ಮನೆ ಕೊಂಡದ್ದು... ಘಟೋದ್ಗಜನ ಉಪನಯನ ಮುಂದಿನ ತಿಂಗಳು... ಮಂತ್ರಿಗಳಿಗೂ ಆಹ್ವಾನ ಕಳಿಸುತ್ತಾರೆ.... ಈಗ ಅರ್ಜುನ - ನಕುಲ ಬಾಯಿ ಬಾಯಿ ಬಿಡ್ತಾರೆ... ಯಾತಕ್ಕೆ ಹೇಳಿದೇಂದರೆ... ಯಾವ ಪೂಜೆ ಮಾಡಲಿ ಭಕ್ತಿಯಿಂದ ಮಾಡಬೇಕೂನ್ನೋದಕ್ಕೆ ಹೇಳ್ತೀನಿ... ಮುಂದಿನ ತಿಂಗಳು ಕ್ರಿಷ್ಣೇಂದ್ರ ಭವನ ಪ್ರಾರಂಭಿಸುತ್ತಾರೆ. ಬಾಡಿಗೆ ಐನೂರು.''

''ಇನ್ನೂ ಅಜ್ಞಾತವಾಸದಲ್ಲೇ ಇದ್ದೀರಾ?...''

''ಇಲ್ಲ ಈಚಲಕರಂಜಿ ಮೊಕದ್ದಮೆ ಹೂಡಲೇ ಇಲ್ಲ. ಪೋಲೀಸರಿಗೆ ಹಸಿರುನೋಟು ತೋರಿಸಿದರು... ಎಲ್ಲಾ ಸರಿಹೋಯ್ತು....''

''.... ಎಲ್ಲದಕ್ಕೂ ಕಾಲ ಬರಬೇಕು ಕೆಂಚಮ್ಮ...''

''ನಾಳೆ ಭೀಮನ ಅಮಾವಾಸ್ಯೆ!... ನಿಮ್ಮ ಹುಡುಗೀನೂ ಶ್ರದ್ಧೆಯಿಂದ ಪೂಜೆ ಮಾಡ್ಲಿ ಹೇಳಿ... ಬರ್ತೀರಾ... ಕುಂಕುಮಕೊಳ್ಳಿ...''

''ನಮಸ್ಕಾರ ಕೆಂಚಮ್ಮ... ಬರ್ತೇನೆ...''

''ನಮಸ್ಕಾರ...''

ಶಾಸ್ತ್ರ - ಶಾಸ್ತ್ರಕ್ಕೆ

– ಶ್ರೀಮತಿ ಅರುಣಾ ಆರ್. ಕಾರಂತ

ವೇದ ಶಾಸ್ತ್ರ, ವೈದ್ಯ ಶಾಸ್ತ್ರ, ಪಾಕ ಶಾಸ್ತ್ರ, ಪವನ ಶಾಸ್ತ್ರ, ಧರ್ಮ ಶಾಸ್ತ್ರ, ನ್ಯಾಯ ಶಾಸ್ತ್ರ, ಅರ್ಥ ಶಾಸ್ತ್ರ, ವ್ಯಾಕರಣ ಶಾಸ್ತ್ರ, ಭಾಷಾ ಶಾಸ್ತ್ರ, ಅಂತೇನೇನೋ ಶಾಸ್ತ್ರಗಳನ್ನು ಓದಿಲ್ದೆ ಇದ್ರೂ, ಅವು ಇದ್ದಾವೆಂತ ಕೇಳಿದ್ದೇನೆ, ಆದರೆ ಅವುಗಳ ಜತೆಯಲ್ಲಿ ಊಟದ ಶಾಸ್ತ್ರ, ಸ್ನಾನದ ಶಾಸ್ತ್ರ, ಓದಿನ ಶಾಸ್ತ್ರ, ಹಲ್ಲುಜ್ಜುವ ಶಾಸ್ತ್ರ ಅಂತ ಮತ್ತೆ ನೂರೆಂಟು ಶಾಸ್ತ್ರಗಳನ್ನ ಕೇಳ್ಬೇಕಿದ್ರೆ, ಬನ್ನಿ ನಮ್ಮಲ್ಲಿಗೇ ಬನ್ನಿ ಇಲ್ಲಿ ಅವುಗಳನ್ನೆಲ್ಲ ಓದೊಕ್ಕಲ್ಲ ನೋಡೋಕ್ಕೆ ಮಾತ್ರ ಸಾಧ್ಯ. ಯಾಕೇಂದ್ರೆ, ಆ ಶಾಸ್ತ್ರಾನೆಲ್ಲಾ ಇಲ್ಲೀ ತನ್ಕ ಯಾರೂ ಬರೆದಿಟ್ಟಿರೋ ಹಾಗೆ ನನಗೆ ತಿಳೀದು. ಆದರೆ ನಮ್ಮಮ್ಮ ಅಂದರೆ ಐವತ್ತರ ದಶಕದ ಮಡಿ ಹೆಂಗುಸಲ್ಲ ಇಪ್ಪತ್ತೊಂದನೇಯ ಶತಮಾನದ ಮಾಡರ್ನ ಮದರ್ರು. ಶಿಸ್ತು, ಟೈಮ್ ಶೆಡ್ಯೂಲಿನಂತೆ ಕೆಲಸ ಆಗಬೇಕೆನ್ನುವಾಕೆ, ಬೆಳಿಗ್ಗೆ ಏಳುವುದು ಸ್ವಲ್ಪ ತಡವಾದರೂ (ನಮ್ಗಿಂತ ಮೊದ್ಲೇ ಅನ್ನಿ) ಏಳುತ್ತಲೇ, ನಮ್ಮನ್ನ ಎಬ್ಬಿಸುತ್ತಲೇ ಶಾಸ್ತ್ರ ಊದೋಕೆ ಶುರು ಮಾಡಿದ್ರೆ ರಾತ್ರಿ ಮಲಗೊ ತನಕಾನೂ ಒಂದಲ್ಲಾ ಒಂದು ಶಾಸ್ತ್ರಾನ್ನ ನೆನಪಿಸ್ತಾನೇ ಇರ್ತಾಳೆ. ಅದಕ್ಕೆ ನಮ್ಮಪ್ಪ ಅವಳು ಉಪದೇಶ ಶುರು ಮಾಡ್ತಿದ್ದಂಗೆ "ಉಪದೇಶಾಮೃತ ವರ್ಷಿಣೀಂ ಭಗವತೀಂ... ಅದ್ಯಾಯಿನೀಂ ಇತಿ.... ಪುರಾಣೇ... ಖಂಡೇ, ಸ್ನಾನ, ಭೋಜನ, ದಂತಧಾವನ, ಗೃಹಚಾಮರ ಸೇವಾ... ಇತ್ಯಾದಿ ಅಧ್ಯಾಯ" ಅಂತ ಅಣಕಿಸ್ತಾರೆ, ಆಗೆಲ್ಲ ನಮ್ಮಮ್ಮನ ಮೂಗು ಕೆಂಪಡರಿದ್ರೂ, ಕೊನೆಗೆ ನಿಮ್ಮಕ್ಳನ್ನ ನೀವೀಗ ತಿದ್ದದೇ ಇದ್ರೆ ನಾಳೆ ಬಗ್ತಾವೆಯೇ? ಒಂದ್ ಕಡ್ಡಿ ಎತ್ತಿಡೋದಿಲ್ಲ ನಾ ಒಬ್ಳೆ ಎಷ್ಟೂಂತ ಮಾಡ್ಬೇಕು? ನೀವುಂಟು ನಿಮ್ಮಕ್ಕುಂಟು ಎಂದು ಹೇಳಿ "ನೀವು ಇನ್ನು ಸ್ವಲ್ಪ ಹೊತ್ನಲ್ಲಿ ಟೈಮಾಯ್ತು, ಆಫೀಸಿಗೆ ತಡವಾಗ್ತದೆ, ನನ್ನ ಬಟ್ಟೆಯೆಲ್ಲಿ? ಪರ್ಸೆಲ್ಲಿ? ಅಂತ ಕುಣಿದಾಡ್ಲಿಕ್ಕೆ ಶುರು ಮಾಡ್ತೀರಿ, ನನಗಂತೂ ಹೇಳಿ ಹೇಳಿ ಸಾಕಾಯ್ತು ಅಂತ ಸ್ವಲ್ಪ ಸುಮ್ನಾಗ್ತಾಳೆ, ಆದ್ರೆ ನಮ್ಮಪ್ಪ ಕಿಲಾಡಿ, ಬಿಡ್ತಾರ್ಯೇ? ಅಮ್ಮ ಸುಮ್ಮನಾದ ಕೂಡಲೇ "ಈ ಮೌನವ ತಾಳೆನು.... ಎಂತಲೊ, ಕೋಪವೇಕೆ ಕೋಪವೇಕೆ ಅಜ್ಜಿ... ಎಂತಲೊ, ಆರು ಮುನಿದು ನಮ್ಮನೇನು ಮಾಡುವರು... ಮನಕೆ ಮನೋಹರವಲ್ಲದ ಗಂಡನು ಮನಕೆ ಬಾರನು ನೋಡವ್ವ ಕೆಳದಿ... ಎಂತಲೊ ಗಟ್ಟಿಯಾಗಿ ಹಾಡುತ್ತ ಅಣಕಿಸಲಾರಂಭಿಸ್ತಾರೆ, ಆಗ ಒಂದೋ ಅಮ್ಮನ ಸಿಟ್ಟು ಇಳೀತದೆ ಇಲ್ಲಾ ಸಿಟ್ಟೇರ್ತದೆ ಅಪ್ಪ ಅಮ್ಮನ ಈ ಜೂಜಾಟದ ಮಧ್ಯೆ ನಾನು

ಸ್ನಾನದ ಮನೆ ಹೊಕ್ಕಿರ್ತೇನೆ, ಎರಡು ತಂಬಿಗೆ ನೀರು ನೆಲಕ್ಕೆ ಬೀಳುವ ಶಬ್ದ ಕೇಳುತ್ತಿದ್ದಂತೆಯೇ ಅಮ್ಮ ಅಡಿಗೆ ಮನೆಯಿಂದ್ಲೇ ಹೇಳ್ತಾಳೆ ''ನೀ ಶಾಸ್ತ್ರೋಕ್ತ ಸ್ನಾನ ಮಾಡಿದ್ದು ಸಾಕು... ಇನ್ನೂ ಮೂರ್ಮಂದಿ ಸ್ನಾನಾ ಮಾಡ್ಬೇಕು. ಇಡೀ ಹಂಡೆ ಖಾಲಿ ಮಾಡಿ ಬರ್ತೀಯಾ, ಮತ್ತೆ ಒಲೆಗೆ ಉರಿ ಹಾಕೋದು ನನ್ನಿಂದಾಗದು ಅಂತ, ಸ್ನಾನ ಮುಗ್ಸಿ ಬಟ್ಟೆ ಹಾಕ್ಕೊಳ್ತಿದ್ದಂತೆಯೇ ಅಮ್ಮ ಹೇಳ್ತಾಳೆ 'ಶಾಸ್ತ್ರೋಕ್ತ ತಲೆ ಬಾಚ್ಕೊಂಡು ಡ್ರೆಸ್ ಅಪ್ ಆದ್ದು ಸಾಕು. ಬೇಗ ರೆಡಿಯಾಗಿ ಟಿಫಿನ್ನಿಗೆ ಬಾ' ಅಂತ.

ಮತ್ತೆ ಟಿಫಿನ್ನಿಗೆ ಕೂತಾಗ ತಟ್ಟೆ ತುಂಬ ಇಡ್ಲಿಯೊ ಉಪ್ಪಿಟ್ಟೋ ಹಾಕುತ್ತಲೇ ನಾನು ಸಾಕು ಎನ್ನುತ್ತಲೇ ಶುರು ಮಾಡುತ್ತಾಳೆ. 'ಸರಿಯಾಗಿ ಊಟ ಮಾಡು. ಊಟದ ಶಾಸ್ತ್ರ ಮಾಡಿ ಏಳ್ಬೇಡ, ಬೆಳೆಯೋ ಮಕ್ಕಳು ಸರಿಯಾಗಿ ತಿಂದು ಉಣ್ಣಬೇಕು. ಮತ್ತೆ ಶಕ್ತಿ ಬರೋದು ಹೇಗೆ?' ''ಖೂಬ್ ಖಾವೋ ಖುಷೀಸೇ ಖಾವೋ'' ಅನ್ನೋ ನಿಮ್ಮಪ್ಪನ ಸ್ಲೋಗನ್ನು ನಿಮ್ಮ ಕಿವಿಗ್ ಬೀಳೋದೇ ಇಲ್ವೇನೊ?

ಬೆಳಿಗ್ಗೆ ಏಳೋದ್ರಿಂದ ಹಿಡಿದು ಮುಖ ತೊಳೆಯುವುದು, ಹಲ್ಲುಜ್ಜುವುದು, ಸ್ನಾನ, ತಲೆ ಬಾಚುವುದು, ಡ್ರೆಸ್ ಅಪ್ ಆಗುವುದು ಈ ಎಲ್ಲಾ ಕೆಲಸಗಳು ಶಾಸ್ತ್ರಕ್ಕಾದ್ರೆ ಸಾಕಂತೆ ಆದ್ರೆ ಊಟ ಮಾತ್ರ ಶಾಸ್ತ್ರೋಕ್ತ ಆಗ್ಬೇಕಂತೆ. ಇದು ನಮ್ಮಮ್ಮನ ಪ್ರಿನ್ಸಿಪಲ್ಲು. ನಾನೆಲ್ಲಾದ್ರು ಬಾಯ್ತಪ್ಪಿ ಟೈಮಿಲ್ಲಾಮ್ಮಾ ಅಂದ್ರೆ ಸಾಕು, ಮತ್ತೊಂದು ಟೈಮ್ ಟೇಬಲ್ ಶಾಸ್ತ್ರಾನೇ ಉಪದೇಶಿಸ್ತಾಳೆ. ಅದಿರ್ಲಿ, ನನ್ತಲೆಗೆ ರಿಬ್ಬನ್ನು ಕಟ್ಟೀಗ ಬಸ್ಸಿಗೆ ದುಡ್ಡು ಕೊಡು ಎಂದು ನಾನು ಗಡಬಡಿಸಿದರೆ ರಾತ್ರಿಯೇ ನಿಮ್ ನಿಮ್ಮ ಪುಸ್ತಕಾ ಜೋಡಿಸಿಟ್ಕೊಂಡು ಬಸ್ಸಿಗೆ ದುಡ್ಡು ಎಲ್ಲಾ ತೆಗೆದಿಟ್ಟುಕೊಂಡಿರಬೇಕಂದ್ರೆ, ನೀವೆಲ್ಲಿ ಕೇಳ್ತೀರಾ? ಸಂಜೆ ಶಾಲೆಯಿಂದ ಬಂದ ತಕ್ಷಣವೇ ''ಡಿಸ್ನಿ ಅವರ್ರು 'ನ್ಯೂಸು' ಅದೂ ಇದೂ ಅಂತ ಶಾಸ್ತ್ರೋಕ್ತ ಟಿ.ವಿ. ನೋಡ್ಕೊಂಡು ಮತ್ತೆ ಸಮಯ ಉಳಿದ್ರೆ ಪುಸ್ತಕ ತೆರೀತೀರಾ! ಅಷ್ಟರಲ್ಲಿ ಗಂಟೆ 9 ಆಗ್ತದೆ, ಊಟ ಮಾಡ್ದೆ, ನಿದ್ದೆ ಬಂತು ಎಂದ್ರಾಯ್ತು'' ಎಂದು ನಮ್ಮ ಬಾಯ್ಮುಚ್ಚಿಸ್ತಾಳೆ.

ಅಂದ್ರೆ ನಮ್ಮಮ್ಮ ಹೇಳೋದೆಲ್ಲಾ ಮಾತ್ರ ಶಾಸ್ತ್ರಕ್ಕಲ್ಲ; ಅವ್ಳಿಗೆಲ್ಲಾ ಕೆಲಸಾನೂ ಶಾಸ್ತ್ರೋಕ್ತವಾಗಿ ಆಗ್ಬೇಕು, ಒಂದ್ನಿಮಿಷಾನೂ ಸುಮ್ನೆ ಕೂತ್ಕೋಳಲ್ಲ. ಅವಳಿಗೆ ಆಲಸಿಗಳನ್ನ ಕಂಡ್ರೆ ತುಂಬಾ ಕೋಪ, ಆದ್ರೂ ನನಗೆ ಕೆಲವೊಮ್ಮೆ ನಮ್ಮಮ್ಮನ್ನ ಕೇಳ್ಬೇಕನ್ನಿಸುತ್ತದೆ, 'ಈ ಶಾಸ್ತ್ರ ಎಲ್ಲಾ ಯಾರ್ಮಾಡಿದ್ದು, ಯಾವ ಪುಸ್ತಕದಲ್ಲಿದೆ' ಅಂತ. ಆದ್ರೆ ಅದಕ್ಕೆ ನಮ್ಮಮ್ಮ ಇನ್ನೊಂದ್ಯಾವದಾದರೂ ಶಾಸ್ತ್ರದ ಹೆಸರು ಹೇಳ್ತಾಳೊ ಅಂತ ಹೆದರಿಕೆಯಿಂದ ಸುಮ್ನಿರ್ತೇನೆ.

ಆದ್ರೂ ನಮ್ಮಮ್ಮ ಹೇಳೋ ಈ ಶಾಸ್ತ್ರಗಳೆಲ್ಲಾ ಇದ್ದಿರ್ಲಿಕ್ಕೂ ಸಾಕು ಎಂದೆನ್ನಿಸುತ್ತದೆ. ಕೆಲವೊಂದು ಶಾಸ್ತ್ರದ ಬಗ್ಗೆ ಅಷ್ಟಿಷ್ಟು ಅಲ್ಲೊಂದು ಇಲ್ಲೊಂದು ವಿಷಯ ಪುಸ್ತಕದಲ್ಲಿ ಸಿಗುತ್ತದೆ, ಸ್ನಾನದ ಶಾಸ್ತ್ರದ ಬಗ್ಗೆ ಕು.ವೆಂ.ಪು. ರವರ 'ಅಜ್ಜಯ್ಯನ ಅಭ್ಯಂಜನ' ಓದಿದ್ರೆ ಸ್ವಲ್ಪ ತಿಳಿಯುತ್ತದೆ. ಆದ್ರೆ ಅಮ್ಮ ಹೇಳೋ ಇತರ ಶಾಸ್ತ್ರಗಳ ಬಗೆಗೆ ಆಧಾರ ಸಿಗೋದು ತುಸು ಕಷ್ಟವೇ.

ಶಾಸ್ತ್ರಕ್ಕೊಂದು ತುತ್ತು ಉಂಡೆದ್ದೆ, ಶಾಸ್ತ್ರಕ್ಕೆ ಕೈತೊಳೆದೆ ಸ್ನಾನದ ಶಾಸ್ತ್ರ ಮಾಡ್ದೆ ಅಂತಾರಲ್ಲ ಇಲ್ಲಿ ಶಾಸ್ತ್ರ ಅನ್ನೋದು ಏನು ಅಂತ ನಮ್ಮೂರ ಶಾಸ್ತ್ರಿಗಳ ಹತ್ರ ಕೇಳಿದೆ ಅದ್ಕೆ ಅವರು ''ಮಗು, ಪುಣ್ಯಕ್ಷೇತ್ರಕ್ಕೆ ಹೋದಾಗ ಸ್ನಾನ ಮಾಡ್ಬೇಕು ಅನ್ನೋದು ನಂಬ್ಕೆ. ಆದ್ರೆ ಕೆಲವೊಂದು ಕಡೆ ಅಲ್ಲಿ ನೀರು ಮುಟ್ಟಿದ್ರೆ ಮನೆಗೆ ಬಂದು ಮತ್ತೆ ಸ್ನಾನ ಮಾಡ್ಬೇಕು ಅನ್ನೊ ಹಾಗೆ ಇರುತ್ತದೆ. ಅದಕ್ಕೆ ನಾಲ್ಕು ಹನಿ ನೀರನ್ನು ತಲೆಮೇಲೆ ಪ್ರೋಕ್ಷಣೆ ಮಾಡಿಕೊಂಡು ಬಿಡೋದು 'ಸ್ನಾನದ ಶಾಸ್ತ್ರ' ಹಾಗೆಯೇ ಅನ್ಯಾಹಾರ ಮಾಡುವವರು ಊಟಕ್ಕೆ ಕರೆದಾಗ ದಾಕ್ಷಿಣ್ಯಕ್ಕೆ ಹೋಗಿರ್ತೇವೆ. ಆದ್ರೆ ಅಲ್ಲಿ ಊಟ ಮಾಡೋದು ಮನಸ್ಸಿಗೆ ಹಿಡಿಸಲ್ಲ, ಆಗ ಎಲೆ ಮುಂದೆ ಕೂತು ಎದ್ದಂತೆ ಮಾಡುವುದು ಊಟದ ಶಾಸ್ತ್ರ, ಅದು ಒಂದು ಶಿಸ್ತು. ಒಂದು ಫಾರ್ಮಾಲಿಟಿ ಇದ್ದ ಹಾಗೆ, ಅತಿಥಿಗಳಾಗಿ ನಾವು ಹ್ಯಾಗೆ ನಡ್ಕೋಳ್ಳಬೇಕೋ ಅದರಂತೆ ನಡೆಯುವ ಯತ್ನ ಶಿಷ್ಟಾಚಾರ ಅಷ್ಟೆ! ಆದ್ರೆ ಶಾಸ್ತ್ರೋಕ್ತ ಅಂದ್ರೆ ಅದೊಂದ್‌ಥರ ರಿಟನ್ ಆರ್ ಓರಲ್ ಟ್ರೇಡಿಶನ್. ಅದು ಹಾಗೆ ಆಚರಿಸ್ಬೇಕು ಅದು ಕೋಡ್ ಆಫ್ ಕಾಂಡಕ್ಟು... ವಿಧಿ... ವಿಧಾನ'' ಅಂದರು ಶಾಸ್ತ್ರಿಗಳು. ಆದ್ರೂ ಇದ್ರಿಂದ ನನಗೇನು ಸಮಾಧಾನ ಆಗ್ಲಿಲ್ಲ. ನಮ್ಮಮ್ಮ ಹೇಳೋ ಶಾಸ್ತ್ರಾನೆಲ್ಲ ಒಂದ್ಸಲ ಪಟ್ಟಿ ಮಾಡ್ಕೊಂಡು ಅದ್ರ ಬಗ್ಗೆ ಸಂಶೋಧನೆ ನಡೆಸಿ ಥೀಸಿಸ್ ಬರೀಬೇಕು ಅಂತ ಇದ್ದೇನೆ. ಹಾಗೆಯೇ ನಿಮ್ಮ ಮನೆಯಲ್ಲೂ ಇಂತಹ ಯಾವ್ದಾದ್ರೂ ಹೊಸ ಶಾಸ್ತ್ರ ಕಿವಿ ಮೇಲೆ ಬಿದ್ದಿರಬಹುದು ಅದ್ರ ಬಗ್ಗೆ ಖಂಡಿತಾ ತಿಳಿಸ್ತೀರಲ್ಲ!



''ನಾನು ಕಳಿಸಿದ
ಈಮೇಯ್ಲ್ ಓದ್ಲಿಲ್ವಾ?''

ದಾರದ ಚಮತ್ಕಾರ

– ಎಂ.ಎನ್.ಕೆ.

(James Herriot ಅವರ ಕಥೆಯ ಅನುವಾದ)

ಸಮಯ 30ರ ದಶಕ. ಸ್ಥಳ: ಯಾರ್ಕ್ ಶೈರ್ ಹತ್ತಿರದ ಹಳ್ಳಿ

James Herriot, Siegfried Farnon ರವರ ಪಶುವೈದ್ಯ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಕಾಲ.

ಫಾರ್ನಾನ್ ಅಲ್ಲಿನ ಬಹು ಹೆಸರುವಾಸಿ ಪಶುವೈದ್ಯ. ಫಾರ್ನಾನ್ ಬಂದರೆ ಸತ್ತು ಬಿದ್ದಿರುವ ಪ್ರಾಣಿಗಳೂ ಎದ್ದು ಕುಳಿತುಕೊಳ್ಳುತ್ತವೆ ಎಂಬ ನಂಬಿಕೆ ಅಲ್ಲಿನ ರೈತರಲ್ಲಿ. ರೈತರಿಗೆ ಅವರಲ್ಲಿ ಇರುವ ವಿಶ್ವಾಸದೊಂದಿಗೆ ಅಷ್ಟೇ ಭಯ. ಫಾರ್ನಾನ್ ಸಿಟ್ಟಿಗೆದ್ದರೆ ಅವ ಏನು ಮಾಡಲೂ ಸಿದ್ಧ ಎಂಬ ಭಯ ಅಲ್ಲಿನವರಿಗೆ. ಆತ ಮನಸ್ಸು ಮಾಡಿದರೆ ತನ್ನ ಅನೇಕ ಚಮತ್ಕಾರಗಳಿಂದ ಎಂಥ ಕಾಹಿಲೆಯನ್ನೂ ತನ್ನ ಕೈ ಗುಣದಿಂದ ಸರಿಪಡಿಸುವರೆಂಬ ಅಚಲ ವಿಶ್ವಾಸ ಅಲ್ಲಿನ ರೈತರಿಗೆ.

ಸಂಜೆಯಾದರೆ ಈ ರೈತರು ಸೇರುವ ಪಬ್‌ಗಳಲ್ಲಿ Subject of Discussion ಫಾರ್ನಾನ್‌ರ ಅಂದಿನ ಸಾಧನೆ ಮತ್ತು ಚಮತ್ಕಾರ. ಒಂದು ಪೈಂಟ್ ಬೀರ್ ಕೊಂಡು ಅದನ್ನು ಗುಟುಕರಿಸುತ್ತಾ ಫಾರ್ನಾನ್ ರವರ ಚಮತ್ಕಾರಗಳ ವಿಶ್ಲೇಷಣೆ ನಡೆಯುತ್ತಿತ್ತು ಅಲ್ಲಿ.

''ನನ್ನ ಹಸು ಜ್ಞಾನ ತಪ್ಪಿ ಬಿದ್ದಿತು. ಫಾರ್ನಾನ್ ಬಂದು ಒಂದು ಬಾಟಲ್ ಔಷಧಿ ಕುಡಿಸಿ 'ಜಾನ್ ನಿನ್ನ ಹಸು ಇನ್ನು ಎರಡು ಗಂಟೆ ಒಳಗೆ ಎದ್ದು ಕೂಡುತ್ತೆ' ಅಂದ. ನಾನು ನನ್ನ ಗಡಿಯಾರ ನೋಡುತ್ತಲೇ ಇದ್ದೀನಿ. ಮುಳ್ಳು ಎರಡು ಗಂಟೆ ಮುಟ್ಟುವಲ್ಲೇ ನನ್ನ ಹಸು ಎದ್ದು ಕೂಡಬೇಕೇ.''

''ನನ್ನ ಕುದುರೆಗೆ ಗಾಯ ಆಗಿದ್ದು ಎಡ ಕಾಲಿಗೆ. ಈ ಫಾರ್ನಾನ್ ಇನ್ಜೆಕ್ಷನ್ ಕೊಟ್ಟಿದ್ದು ಬಲಗಾಲಿಗೆ. ಎಡಗಾಲಿನ ಗಾಯ ಎರಡೇ ದಿನದಲ್ಲಿ ವಾಸಿ.''

''ನನ್ನ ಕುದುರೆ ಕಾಲು ಬಾತುಕೊಂಡಿತ್ತು. ಈ ಫಾರ್ನಾನ್ ಬಂದೋನೇ ಅದರ ರಕ್ತನಾಳದಿಂದ ಗ್ಯಾಲನ್ ಗಟ್ಟಳೆ ರಕ್ತ ತೆಗೆದ. ನೋಡೋಕೆ ಭಯವಾಗಿತ್ತು. ಈಗ ನನ್ನ ಕುದುರೆ ಚೆನ್ನಾಗಿ ಓಡಿಕೊಂಡಿದೆ.''

ಇದೇ ರೀತಿ ನಡೀತಿತ್ತು ಅಲ್ಲಿನ ವ್ಯಾಖ್ಯಾನ. ಫಾರ್ನಾನ್ ಗುಣಗಾನ.

ಒಂದು ಬೆಳಿಗ್ಗೆ ರೈತ ಹಾಕಿನ್ಸ್ ಫೋನ್ ಮಾಡಿ ಅವನ ಕರು ಜ್ಞಾನತಪ್ಪಿ ಬಿದ್ದಿದೆಯೆಂದೂ ಫಾರ್ನಾನ್ ಕೂಡಲೇ ಬರಬೇಕೆಂದೂ ಕೇಳಿಕೊಂಡ.

ಫಾರ್ನಾನ್: ಜೇಮ್ಸ್ ನೀನೂ ಬಾ ನನ್ನ ಜೊತೆ. ನಿನ್ನ ಸಹಾಯ ಬೇಕಾಗುತ್ತೆ ನನಗೆ. ಆ ವಯಸ್ಸಾದ ರೈತ ಹಾಕಿನ್ಸ್ ಕೈಲಿ ಸಹಾಯ ಸಾಧ್ಯವಿಲ್ಲ. ಬೇಗ ಹೋಗೋಣ. ಅವನು ಬಹಳ ಗಾಬರಿಯಲ್ಲಿದ್ದಾನೆ.

ಈ ಇಬ್ಬರೂ ಹಾಕಿನ್ಸ್ ಹೊಲಕ್ಕೆ ಹೋದರು. ಅಲ್ಲಿ ಬಿದ್ದಿದ್ದ ಕರುವನ್ನು ಪರೀಕ್ಷೆ ಮಾಡುತ್ತಾ ಫಾರ್ನಾನ್ ''ಮಿ. ಹಾಕಿನ್ಸ್. ನನಗೆ (ಕೈ ತೋರಿಸುತ್ತಾ) ಇಷ್ಟುದ್ದಾ ದಾರಾ ಸಿಗುತ್ತಾ?'' ಅಂತ ಕೇಳಿದರು.

ಹಾಕಿನ್ಸ್ ''ಖಂಡಿತ ಮಿ ಫಾರ್ನಾನ್. ಖಂಡಿತ. ಇದೀಗ ತರುತ್ತೇನೆ'' ಅನ್ನುತ್ತಾ ಹೊರಗೆ ಹೋಗುವಾಗ ''ಮಿ. ಜೇಮ್ಸ್ ನೀವು ನನ್ನ ಜೊತೆ ಬನ್ನಿ. ಇಬ್ಬರೂ ದಾರವನ್ನು ಹುಡುಕೋಣ'' ಅನ್ನುತ್ತಾ ಜೇಮ್ಸ್‌ರನ್ನೂ ಕರೆದುಕೊಂಡು ಹೊರಹೋಗಿ ಜೇಮ್ಸ್‌ರವರ ಕಿವಿಯಲ್ಲಿ ''ಅವರಿಗೆ ದಾರಾ ಯಾಕೆ ಬೇಕು? ಆ ದಾರದಿಂದ ನನ್ನ ಕರುವನ್ನು ಹೇಗೆ ವಾಸಿಮಾಡುತ್ತಾರೆ'' ಎಂದು ಕೇಳಿದ.

ಜೇಮ್ಸ್ ''ಅವರಿಗೆ ದಾರಾ ಯಾಕೆ ಬೇಕೋ ನನಗೆ ಗೊತ್ತಿಲ್ಲಾ. ಅದರಿಂದ ನಿನ್ನ ಕರುವಿಗೆ ಹೇಗೆ ವಾಸಿಮಾಡುತ್ತಾರೋ ಅದೂ ನನಗೆ ಗೊತ್ತಿಲ್ಲಾ'' ಅಂದ.

ಹಾಕಿನ್ಸ್ (ನಗುತ್ತಾ) ''ನನಗೆ ಗೊತ್ತು. ನಿಂಗೆ ಸರಿಯಾಗಿ ಗೊತ್ತಿಲ್ಲಾಂತ. ನೀನಿನ್ನೂ ತುಂಬಾ ಪಳಗಬೇಕು ಅವರ ಹತ್ತಿರ. ಈಗ ನೋಡಿ ಕಲಿತುಕೋ. ಇಂಥಾ ಖಾಹಿಲೆಗಳನ್ನು ದಾರದಿಂದ ಹೇಗೆ ವಾಸಿಮಾಡೋದೂಂತ'' ಅನ್ನುತ್ತಾ ಒಂದು ದಾರವನ್ನು ಹುಡುಕಲು ಶುರು ಮಾಡಿದ ಅವನ ದನದ ಕೊಟ್ಟಿಗೆಗಳಲ್ಲಿ.

ದಾರ ಸಿಗಲಿಲ್ಲ. ''ಬೇಡದಿದ್ದಾಗ ಕಾಲುಕಾಲಿಗೆ ಸಿಗುತ್ವೇ ಈ ದಾರಗಳು. ಬೇಕಾದಾಗ ಒಂದೂ ಸಿಗಲ್ಲ. ಮಿ. ಫಾರ್ನಾನ್ ಏನಂದುಕೊಳ್ಳುತ್ತಾರೆ. ಎಷ್ಟು ಹೊತ್ತು ಕಾಯುತ್ತಾರೆ'' ಅಂದುಕೊಂಡು ಹುಡುಕಿ ಒಂದು ದಾರವನ್ನು ಹೊರತೆಗೆದು ಹಾಕಿನ್ಸ್ ''ಮಿ. ಜೇಮ್ಸ್. ಇದು ಸಾಕಾಗಬಹುದಾ ಮಿ. ಫಾರ್ನಾನ್ಗೇ'' ಅಂತ ಕೇಳಿ ಉತ್ತರಕ್ಕೂ ಕಾಯದೆ ಓಡುತ್ತಾನೆ ಫಾರ್ನಾನ್ ಬಳಿ.

ಫಾರ್ನಾನ್: Thank you ಮಿ. ಹಾಕಿನ್ಸ್. ಈ ದಾರ ಸರಿಯಾಗಿದೆ. ದಿಸ್ ಇಸ್ ಪರ್ಫೆಕ್ಟ್ ಅನ್ನುತ್ತಾ ಆ ದಾರವನ್ನು ತಮ್ಮ ಸೊಂಟಕ್ಕೆ ಕಟ್ಟಿಕೊಳ್ಳುತ್ತಾರೆ.

ಹಾಕಿನ್ಸ್: ಮತ್ತೆ.... ಮತ್ತೆ... ಆ ದಾರ. ನನ್ನ ಕರು ಗತಿ?

ಫಾರ್ನಾನ್: ಈ ದಾರಾನ? ನಿನ್ನೆ ಒಂದು ಹಸು ಅದರ ಕೊಂಬಿನಿಂದ ನನ್ನ ಕೋಟಿನ ಗುಂಡಿಗಳನ್ನೆಲ್ಲಾ ಕಿತ್ತುಹಾಕಿತು. ಗುಂಡಿಗಳಿಲ್ಲದ ಕೋಟ್

ಹಾಕಿಕೊಂಡು ಬಗ್ಗಿ ಕೆಲಸ ಮಾಡೋದು ಕಷ್ಟ. ಅದಕ್ಕೇ ಈ ದಾರದಿಂದ ನನ್ನ ಸೊಂಟ ಕಟ್ಟಿಕೊಂಡಿದ್ದೇನೆ. ಈಗ ನನ್ನ ಕೋಟ್ ಕೆಲಸಕ್ಕೆ ಅಡ್ಡ ಬರುತ್ತಿಲ್ಲ....

ಹಾಕಿನ್ಸ್: ಮತ್ತೆ ನನ್ನ ಕರು ಗತಿ. ಅದು ಸತ್ತ ಹಾಗೇನಾ....?


ಫಾರ್ನಾನ್: ನಿನ್ನ ಕರೂನಾ. ಅದಕ್ಕೇ ಅಂಥಾದ್ದೇನೂ ಆಗಿಲ್ಲ. ಈ ಬಾಗಿದ ಅದರ ಬೆನ್ನು ಹುರಿ ನೋಡು. ಅದರ ಮಿದುಳಿಗೆ Infection ಆಗಿದೆ. ಈಗ ಒಂದು Injection ಕೊಡುತ್ತೇನೆ. ನಾಳೆ ಬೆಳಿಗ್ಗೆ ಒಳಗೆ ಅದು ಎದ್ದು ಕೂಡುತ್ತೆ. ಭಯಪಡಬೇಡ.''

ಮುಂದಿನ ದಿನ ಜೇಮ್ಸ್ ಅಲ್ಲಿಗೆ ಒಬ್ಬರೇ ಹೋಗುತ್ತಾರೆ. ಆ ಕರು ಸಂಪೂರ್ಣ ಗುಣವಾಗಿ ಓಡಿಯಾಡಿಕೊಂಡಿದೆ. ಆದರೆ ಮಿ. ಹಾಕಿನ್ಸ್ ಮುಖದಲ್ಲಿ ಗೆಲುವಿಲ್ಲ.

''ನಾನೇನೋ ಆ ದಾರದಿಂದ ಚಮತ್ಕಾರ ಮಾಡಿ ನನ್ನ ಕರುವನ್ನು ವಾಸಿ ಮಾಡುತ್ತಾರೆ ಅಂದುಕೊಂಡಿದ್ದೆ. ಹಾಗೆ ಮಾಡಿದ್ದರೆ ನನ್ನ ಪಬ್‌ನಲ್ಲಿ ಎಲ್ಲಾ ಹೇಳಬಹುದಾಗಿತ್ತು. ಇವರೋ ಬರೀ ಒಂದು ಸೂಚಿ ಚುಚ್ಚಿ ವಾಸಿಮಾಡಿಬಿಟ್ಟರು. ಬರೀ ಒಂದು ಸೂಜೀ ಚುಚ್ಚೋಕ್ಕೇ ಮಿ. ಫಾರ್ನಾನ್ ತಾವೇ ಏಕೆ ಬರಬೇಕಿತ್ತು? ನಿನ್ನಂಥ ಒಬ್ಬ Ordinary Vitnery ನೇ ಕಳಿಸಿದ್ದರೆ ಸಾಕಾಗಿತ್ತು. ಈಗ ನಾನು ನಿಮ್ಮಿಬ್ಬರಿಗೂ ಭಾರೀ ಫೀಸ್ ಬೇರೇ ಕೊಡಬೇಕು'' ಎಂದು ಗೊಣಗುತ್ತ ಮುಂದೆ ಹೋದ.

(Vitnery: Veterinary ಪದಕ್ಕೆ ಗ್ರಾಮ್ಯ.)

''ಈ ಫಾರ್ನಾ ನೆರಳಿನಲ್ಲಿ ನನ್ನ ಕೇಳೋರಿಲ್ಲ. ಬಂದ ದಾರೀಗೆ ಸುಂಕ ಇಲ್ಲಾ'' ಎನ್ನುತ್ತಾ ನಮ್ಮ James Herriot ಆ ಜಾಗ ಖಾಲೀ ಮಾಡಿ ವಾಪಸ್ ಬರುತ್ತಾರೆ.



ಬಿಯಾಂಡ್ ಮಿ...

- ಆನಂದ

ಸಮಯ ಪ್ರಜ್ಞೆಗಾಗಿ ಕೆ.ಇ.ಬಿ.ಯನ್ನು ಅಭಿನಂದಿಸಲು ನನಗೆ ಇನ್ನೊಂದು ಅವಕಾಶ ದೊರೆಯಿತು. ಮೊನ್ನೆ ಸರಿಯಾಗಿ 5ಕ್ಕೆ ವಾಪಸಾಯಿತು. ಅಂದು ರವಿವಾರ. ಕರೆಂಟಿಲ್ಲದೆ ಚಡಪಡಿಸುತ್ತಿದ್ದ ನನ್ನ ಹೆಂಡತಿ ಅದು ಬಂದ ತಕ್ಷಣ ಟಿ.ವಿ. ಹಾಕಿದಳು.

ಹೀರೋ ರವಿಚಂದ್ರನ್ ಬೆಳ್ಳಿ ತೆರೆಯ ಮೇಲೆ ಮೂಡಿದ. ಅವನ ಕೈಯಲ್ಲಿ ಒಂದು ಜೆರ್ರಿ ಕ್ಯಾನ್. ಅದರ ತುಂಬಾ ಸೀಮೆ ಎಣ್ಣೆ. ಸ್ಲೋಮೋಷನ್‌ನಲ್ಲಿ ನಡೆಯುತ್ತಿದ್ದ ಆರ್. ಚಂದ್ರನ್ ತನ್ನ ವೈರಿಯ ಮನೆಯತ್ತ ಹೆಜ್ಜೆ ಹಾಕಿದ. ಅದರ ಸುತ್ತಲೂ ಸೀಮೆ ಎಣ್ಣೆ ಚೆಲ್ಲಿದ. ದೊಡ್ಡ ಮನೆ, ಆದರೇನು ಜೆರ್ರಿ ಕ್ಯಾನ್ ಒಂದು ಅಕ್ಷಯ ಪಾತ್ರೆ. ಸೀಮೆ ಎಣ್ಣೆ ಸ್ಟಾಕ್ ತೀರಲೇ ಇಲ್ಲ. ಆದರೆ ವೈರಿಯ ಮನೆಯವರಿಗೆ ಇವನ ಸಂಚಿನ ಸುಳಿವು ತಿಳಿಯಿತು. ಗುಂಡು ಹಾಕುತ್ತಿದ್ದ ಮನೆಯೊಡೆಯ ರವಿಚಂದ್ರನ್‌ನನ್ನು ಓಡಿಸಲು/ಹಿಡಿಯಲು ಐದಾರು ಮಂದಿ ಚೇಲಾಗಳಿಗೆ ಆಜ್ಞೆ ಮಾಡಿದ. ಹೈಕಮಾಂಡಿನ ಆಜ್ಞೆಯನ್ನು ಪಾಲಿಸಲು ಅವರು ಸಜ್ಜಾದರು.

ಇತ್ತ ರವಿಚಂದ್ರನ್ ತನ್ನ ಫಾಲೋ ಅಪ್ ಆ್ಯಕ್ಷನ್‌ಗೆ ಸಜ್ಜಾಗುತ್ತಿದ್ದ. ಅಂದರೆ ಬೆಂಕಿ ಹಚ್ಚುವುದು. ಆತ ಸೀಮೆ ಎಣ್ಣೆ ತಂದಿದ್ದನೇ ಹೊರತು ಬೆಂಕಿ ಪಟ್ಟಣ ತಂದಿರಲಿಲ್ಲ, ಉದ್ದೇಶಪೂರಕವೋ, ಮರೆವೋ ಅಥವಾ ಉದ್ದೇಶ ಪೂರಕ ಮರೆವೋ ತಿಳಿಯಲಿಲ್ಲ. ಆದರೆ ಅವನಿಗೆ ಹಚ್ಚಿಟ್ಟಿದ್ದ ಬಣ್ಣ ಬಣ್ಣದ ಕ್ಯಾಂಡಲ್‌ಗಳು ನಂತರ ದೊರೆತವು. ಇರಲಿ.

ರೌಡಿಗಳು ಮೇಲೆ ಬಿದ್ದರು. ಒಟ್ಟಿಗೇ ರವಿಚಂದ್ರನ್ ಜೆರ್ರಿ ಕ್ಯಾನ್ ಬದಿಗಿಟ್ಟು, ತೋಳೇರಿಸಿ ಅವರನ್ನು ಎದುರಿಸಿದ ಎಂದು ನೀವು ಭಾವಿಸಿದ್ದರೆ ನಿರ್ದೇಶಕರನ್ನು ಅಂಡರ್ ಎಸ್ಟಿಮೇಟ್ ಮಾಡಿದ್ದೀರಿ ಎಂದಾಯಿತು. ಏಕೆಂದರೆ, ಸೀಮೆ ಎಣ್ಣೆ ಡಬ್ಬಾವನ್ನು ಕೈಲಿ ಹಿಡಿದೇ ಕೌಂಟರ್ ಅಟ್ಯಾಕ್ ಮಾಡತೊಡಗಿದ. ಡಬ್ಬಾದಿಂದಲೇ ರೌಡಿಗಳನ್ನು ಚಚ್ಚಿದ ಅವರ ತಲೆಗೆ ಹೊಡೆದ, ಬೆನ್ನಿಗೆ ಬಾರಿಸಿದ. ಉಹುಂ ಡಬ್ಬಾ ಮುರಿಯಲೇ ಇಲ್ಲ. ಬದಲಿಗೆ ಆ ಹೊಡೆತ ತಡೆಯಲಾರದೆ ರೌಡಿಗಳು ಒದ್ದಾಡಿದರು. ಉರುಳಿದರು. ಪ್ರತಿ ಬಾರಿ ಡಬ್ಬಾದಿಂದ ಹೊಡೆದಾಗಲೂ ಒಂದಿಷ್ಟು ಸೀಮೆ ಎಣ್ಣೆ ಹೊರ ಚೆಲ್ಲುತ್ತಿದ್ದ


ಪವಾಡವನ್ನೂ ನಾನು ನೋಡಿದೆ. ಮನೆಯ ಸುತ್ತ ಸೀಮೆ ಎಣ್ಣೆಯ ಪರಿಶಂಚ್ಯಾಮಿ ಮಾಡಿದಾಗಲೇ ಸ್ಟಾಕ್ ಮುಗಿಯಿತು ಎಂದುಕೊಂಡಿದ್ದೆ. ಆದರೆ ಇಲ್ಲಿ ಹಾಗಾಗುತ್ತಿರಲಿಲ್ಲ. ಪಿ.ಸಿ. ಸರ್ಕಾರ್ ಅವರ ವಾಟರ್ ಆಫ್ ಇಂಡಿಯ ಮ್ಯಾಜಿಕ್ ಶೋದಲ್ಲಿ ತಂಬಿಗೆಯಿಂದ ನಿರಂತರವಾಗಿ ನೀರು ಬರುವಂತೆ ಇಲ್ಲಿ ರವಿಚಂದ್ರನ್ ಜೆರ್ರಿ ಕ್ಯಾನ್‌ನಿಂದ ಸೀಮೆ ಎಣ್ಣೆ ಬರುತ್ತಲೇ ಇತ್ತು.

ನನ್ನನ್ನು ಹಲವಾರು ಪ್ರಶ್ನೆಗಳು ಕಾಡತೊಡಗಿದವು. ಜೆರ್ರಿ ಕ್ಯಾನ್‌ದು ನಮ್ಮ ರಾಜಕಾರಣಿಗಳಂತಹ ದಪ್ಪ ಚರ್ಮದ್ದೇ? ಅದರಿಂದ ಒಂದು ಬಾರಿಸಿದರೆ ಖಳನಾಯಕನ ಬಲಿಷ್ಠ ಚೇಲಾಗಳು ಆಸ್ಟ್ರೇಲಿಯಾದಲ್ಲಿ ನಮ್ಮ ಕ್ರಿಕೆಟ್ಟಿಗರು ನರಳಿದಂತೆ ನರಳುವುದೇ? ಅದಕ್ಕಿಂತ ಹೆಚ್ಚಾಗಿ, ಅಷ್ಟು ಸೀಮೆ ಎಣ್ಣೆ ರವಿಚಂದ್ರನ್‌ಗೆ ಎಲ್ಲಿ ದೊರೆಯಿತು? ಅದು ಪಡಿತರ ಅಂಗಡಿ ಸೀಮೆ ಎಣ್ಣೆ ಆಗಿದ್ದರೆ ಉಳಿದ ರೇಷನ್ ಕಾರ್ಡ್‌ದಾರರು ಅಂದು ಏನು ಮಾಡಿವರು? ಹೀಗೆಂದು ನಾನು ಕೇಳಿದಾಗ ನನ್ನಾಕೆ 'ರೀ ಅದು ಓಪನ್ ಮಾರ್ಕೆಟ್ ಸೀಮೆ ಎಣ್ಣೇರಿ' ಎಂದಳು.

'ಹೇಗೆ ಹೇಳ್ತೀ?' ಎಂದು ಕೇಳಿದೆ.

'ರೇಷನ್ ಸೀಮೆ ಎಣ್ಣೆ ಆದರೆ ಅದು ಬಣ್ಣದ್ದಾಗಿರುತ್ತಿತ್ತು' ಎಂದಳು.

ಅರೆ! ಹೌದು. ಆದರೂ ಜೆರ್ರಿಕ್ಯಾನ್‌ನಲ್ಲಿದ್ದ ಆ ಓಪನ್ ಮಾರ್ಕೆಟ್ ಸೀಮೆ ಎಣ್ಣೆ ಸ್ಟಾಕ್ ಹೇಗೆ ಮುಗಿಯುತ್ತಿರಲಿಲ್ಲ ಎಂಬ ಪ್ರಶ್ನೆಗೆ ಉತ್ತರ ಸಿಗಲೇ ಇಲ್ಲ. ಕನ್ನಡ ಸಿನಿಮಾ ಈಸ್ ಬಿಯಾಂಡ್ ಮಿ ಎಂದು ನನಗೆ ಅರಿವಾಯಿತು.



ಮಾಂಸಾಹಾರ - ಅಹಿಂಸಾವಾದ

– ವೈ.ವಿ. ಗುಂಡೂರಾವ್

ನನಗೆ ಪರಿಚಯದ ಒಬ್ಬ ವೈದ್ಯರಿದ್ದಾರೆ. ಅವರು ಊರಿನಲ್ಲೇ ಹಿರಿಯ ಸರ್ಜನರು (ಸಜ್ಜನರೂ ಸಹ). ಅಲ್ಲದೆ ಅವರು ಇಲ್ಲಿನ ಮೆಡಿಕಲ್ ಕಾಲೇಜೊಂದರಲ್ಲಿ ಅಧ್ಯಾಪಕರೂ ಆಗಿದ್ದಾರೆ. ಅಧ್ಯಾಪಕ ವೃತ್ತಿ ಹಾಗೂ ಆಪರೇಷನ್ನಿನಷ್ಟೇ ಆಧ್ಯಾತ್ಮಿಕತೆಯೂ ಅವರಿಗೆ ಆಪ್ಯಾಯಮಾನ, ಆಧ್ಯಾತ್ಮಿಕತೆಯನ್ನು ತಮ್ಮ ವೃತ್ತಿ ಹಾಗೂ ಪ್ರವೃತ್ತಿಯಲ್ಲಿ ಯಥೇಚ್ಛವಾಗಿ ಬಳಸಿಕೊಳ್ಳುತ್ತಾರೆ. ಹಂತ ಹಂತವಾಗಿ ಗ್ರಂಥಗಳನ್ನು ಅರೆದು ಕುಡಿದು ರೋಗಿಗಳಿಗೂ ಕುಡಿಸುವುದರಲ್ಲಿ ನಿಸ್ಸೀಮರು. ದೇಹಬಾಧೆಯಿಂದ ಅವರಲ್ಲಿಗೆ ಹೋದವರು ಆತ್ಮಬೋಧೆಯನ್ನೂ ಪಡೆದು ಹಿಂತಿರುಗುತ್ತಾರೆ. ಅವರು ಕೊಡುವ ವಿಚಾರದ ಚುಚ್ಚುಮದ್ದು ಮೆಚ್ಚುವಂತಹುದು. ಅವರ ಚಿಂತನಾ ಗುಳಿಗೆ ಎಂಥ ಗಳಿಗೆಯಲ್ಲೂ ಪ್ರಯೋಜನಕಾರಿ.

ಮಾತಿನಲ್ಲೂ ಅವರು ಸರಸಿಗರು, ರಸಿಕರು, ಅವರ ಅನುಭವಗಳನ್ನು ಕೇಳುವುದೇ ಒಂದು ಮಜ, ಮೊನ್ನೆ ಯಾವುದೋ ಕೆಲಸದ ನಿಮಿತ್ತ ಅವರಲ್ಲಿಗೆ ಹೋಗುವ ಅವಕಾಶ ಒದಗಿತು. ಅಂದು ರಜೆಯಾದ್ದರಿಂದ ವೈದ್ಯರು ಮಧ್ಯಾಹ್ನ ಆ ರಾಮನನ್ನು ಸ್ಮರಿಸುತ್ತಾ ಆರಾಮವಾಗಿ ಕುಳಿತಿದ್ದರು.

''ತೊಂದರೆ ಕೊಡಲೇ'' ಅನ್ನುತ್ತಾ ಒಳಗೆ ಕಾಲಿಟ್ಟೆ.

''ನೀನು ಬಂದರೇ ತೊಂದರೆ, ಕೊಡೋದೇನು ಬಂತು ಬೇರೆ'' ಎಂದು ನಕ್ಕು ಪಕ್ಕದಲ್ಲಿದ್ದ ಕುರ್ಚಿಯನ್ನು ತೋರಿಸಿದರು, ನಾನದನ್ನು ಅಲಂಕರಿಸಿದೆ.

''ಏನು ಬಂದೆ'' ಎಂದು ಕೇಳುವ ಮೊದಲೇ, ''ಡಾಕ್ಟರೇ, ನಿಮ್ಮ ಇತ್ತೀಚಿನ ಯಾವುದಾದರೂ ಅನುಭವ ಕೇಳೋಣ ಅಂತ ಬಂದೆ'' ಅಂದೆ. ''ಶುರು ಮಾಡಿದೆಯಾ'' ಅಂತ ಶುರು ಮಾಡಿದರು.

ಇವರು ಪಾಠ ಮಾಡಲು ಹೋಗುತ್ತಿದ್ದ Medical College ನಲ್ಲಿ ಒಬ್ಬ ವಿದ್ಯಾರ್ಥಿ ಇದ್ದನಂತೆ. Thailand ನಿಂದ ಬಂದವನು. ತುಂಬಾ ಬುದ್ಧಿವಂತ ಅಲ್ಲದೆ ಬುದ್ಧವಂತ, ಅಂದರೆ ಬೌದ್ಧಮತದ ಅನುಯಾಯಿ, ಪಾಳಿ ಭಾಷೆ ಕೂಡ ಕಲಿತಿದ್ದ. ಮುಂದೆ ಭಿಕ್ಷುವಾಗುವ ಹಿರಿಯಾಸೆಯನ್ನೂ ಹೊಂದಿದ್ದ. ಅಂಥವನು ಒಂದು ದಿನ Canteen ನಲ್ಲಿ ಮಾಂಸದೂಟ ಮಾಡುತ್ತಿದ್ದುದನ್ನು ಕಂಡು

ವೈದ್ಯರಿಗೆ ಅತ್ಯಾಶ್ಚರ್ಯವಾಯಿತಂತೆ. ಆ ಆಶ್ಚರ್ಯ ತನ್ನ ಜೊತೆ ಕುತೂಹಲವನ್ನೂ ಕರೆದುಕೊಂಡು ನೇರವಾಗಿ ಆ ವಿದ್ಯಾರ್ಥಿಯನ್ನು ಪ್ರಶ್ನಿಸುವ ಹಂತಕ್ಕೂ ತಲುಪಿತಂತೆ.

''ಏನಪ್ಪಾ! ಮಾಂಸ ತಿನ್ನುವವ ಬೌದ್ಧಭಿಕ್ಷು ಹೇಗಾಗುತ್ತಾನೆ? ಬುದ್ಧನ ಅವತಾರದುದ್ದೇಶವೇ ಅಹಿಂಸೆ ಅಲ್ಲವೇ? ಸರ್ವಭೂತಗಳಲ್ಲೂ ದಯೆ ತೋರಿಸುವಂತೆ ಆ ದಯಾಮಯ ಎಲ್ಲರ ಹೃದಯಗಳಿಗೂ ಕರೆಕೊಡಲಿಲ್ಲವೇ? ಹೀಗಿರುವಾಗ ನಿನ್ನ ಈ ವರ್ತನೆಯ ಅರ್ಥವೇ ಆಗುವುದಿಲ್ಲವಲ್ಲಾ'' ಅಂದರಂತೆ, ಅದಕ್ಕವ ಮೂಳೆ ಕಡಿಯುತ್ತಾ ''ಇದರಲ್ಲೇನೂ ಆಶ್ಚರ್ಯವಿಲ್ಲ ಡಾಕ್ಟರೆ, ನಮ್ಮ ದೇಶದಲ್ಲಿ ಎಲ್ಲರೂ - ಬೌದ್ಧಮತದವರೂ ಕೂಡ ಮಾಂಸಾಹಾರಿಗಳೇ'' ಅಂದನಂತೆ. ಇದು ಅವರಿಗೆ ಜೀರ್ಣಿಸಿಕೊಳ್ಳಲಾಗದ ವಿಷಯವಾಯಿತಂತೆ, ಬುದ್ಧನ ಭಕ್ತರು ಮಾಂಸದ ಮಾತೇ ಆಡುವಹಾಗಿಲ್ಲ. ಅದರಲ್ಲೂ ಕೆಲವು ಸಂಪ್ರದಾಯಸ್ಥರು ಮಾಂಸವಂತಿರಲಿ ಈರುಳ್ಳಿ ಬೆಳ್ಳುಳ್ಳಿ ಅಂದರೇನೇ ಮೂಗು ಮುಚ್ಚಿಕೊಳ್ಳುತ್ತಾರೆ. ಹಾಗಿರುವಾಗ ಇವನ ತರ್ಕದಲ್ಲಿ ಹಾಗೂ ದೇಶದಲ್ಲಿ ಏನೋ ತಪ್ಪಿರಬೇಕು ಅನ್ನಿಸಿ ಸ್ಥಳೀಯ ಮಹಾಬೋಧಿ Society ಯಲ್ಲಿ ಈ ವಿಚಾರ ಚರ್ಚಿಸುವಂತೆ ತಿಳಿಸಿ ಅಂದಿನ ಪಾಠ ಪ್ರವಚನ ಮುಗಿಸಿ ಹಿಂತಿರುಗಿದರಂತೆ.

ಮಾರನೆಯ ದಿನ ಆ Thailand ವಿದ್ಯಾರ್ಥಿ ಇವರೆದುರಿಗೆ ಹಾಜರಾದ. ಮುಖದಲ್ಲಿ ತುಂಟನಗೆ ತುಳುಕುತ್ತಿತ್ತು ''ವಿಚಾರಿಸಿದೆ Sir, ಇಲ್ಲಿಯ ಆಚಾರ್ಯರೂ ಮಾಂಸಾಹಾರಿಗಳೇ'' ಅಂದನಂತೆ. ಇವರು ದಂಗಾದರು, ಏನು ಹೇಳಬೇಕೆಂದು ತೋಚಲಿಲ್ಲ. ಅದಕ್ಕೆ ಅವನೇ ಹೇಳಿದ - ''ಅವರು ಹೇಳಿದರು... ನಾವೇ ಸ್ವತಃ ಪ್ರಾಣಿಯನ್ನು ಕೊಂದು ತಿಂದರೆ ಪಾಪ. ಯಾರೋ ಕೊಂದ ಪ್ರಾಣಿಯನ್ನು ತಂದು ತಿಂದರೆ ಪಾಪವೇನೂ ಇಲ್ಲ'' ಅಂತ.


ಇವರಿಗೆ ಇದು ತಪ್ಪು ಅನ್ನಿಸಿದರೂ ''ಸರಿಯಪ್ಪ'' ಅಂದು ಅಲ್ಲಿಗೆ ಆ ವಿಷಯವನ್ನು ಮುಗಿಸಿದರಂತೆ.

ಕೆಲವು ದಿನಗಳುರುಳಿದವು. ಒಂದು ದಿನ ಇವರಿದ್ದ ಆಸ್ಪತ್ರೆಯ Emergency ward ಗೆ ಒಬ್ಬ ಗೂಂಡ gang ಜಗಳದಿಂದ ಗಾಯಗೊಂಡ ತೀರಾ ಪ್ರಾಣಾಪಾಯ ಸ್ಥಿತಿಯಲ್ಲಿ ಬಂದು ದಾಖಲಾದ. ನಮ್ಮ ಕರ್ಮಯೋಗಿ ವೈದ್ಯರ ದಕ್ಷ ಚಿಕಿತ್ಸೆಯಿಂದ ಚೇತರಿಸಿಕೊಂಡು ಕೆಲವೇ ದಿನಗಳಲ್ಲಿ ಗುಣವಾದ (ಆದರೆ ಗುಣ ಮಾತ್ರ ಬದಲಾಗಲಿಲ್ಲ) ಆಸ್ಪತ್ರೆಯಿಂದ ಹೊರಹೋಗುವಾಗ ಆ ಗೂಂಡ ವೈದ್ಯರಿಗೆ ಹೇಳಿದ - ''ನೀವು ದೇವರ ಹಾಗೆ ಬಂದು, ಹೋಗುತ್ತಿದ್ದ ನನ್ನ ಪ್ರಾಣ ಉಳಿಸಿದಿರಿ. ನಿಮ್ಮ ಉಪಕಾರ ಹೇಗೆ ತೀರಿಸಲಿ? ನಿಮಗೆ ಯಾರ ಮೇಲಾದರೂ

ದ್ವೇಷವಿದ್ದರೆ ನನಗೆ ಹೇಳಿ ಕಳುಹಿಸಿ. ಅವರು ಈ ಭೂಮಿಯಲ್ಲಿ ಇರಲೇ ಇಲ್ಲ ಎನ್ನಿಸಿಬಿಡುತ್ತೇನೆ'' ಹೀಗೆ ಹೇಳಿ ಮಾಯವಾದ ತನ್ನ ಶಿಷ್ಯರೊಂದಿಗೆ, ಸಹ-ಗೂಂಡಾಗಳೊಂದಿಗೆ.

ಸಿಕ್ಕಿತು point ಎನ್ನುವಂತೆ ವೈದ್ಯರು ಕಾಲೇಜಿಗೆ ಸರಸರ ನಡೆದು ತಮ್ಮ ಆ Thailand ವಿದ್ಯಾರ್ಥಿಯನ್ನು ಪತ್ತೆ ಮಾಡಿ ಆಸ್ಪತ್ರೆಯಲ್ಲಿ ನಡೆದ ಸಂಗತಿಯನ್ನು ವಿವರಿಸಿ ಕಡೆಗೆ ಕೇಳಿದರು - ''ಈಗ ಹೇಳಪ್ಪಾ; ಒಂದು ವೇಳೆ ನಾನು ಆ ಗೂಂಡಾ ಕೈಯಿಂದ ನಿನ್ನನ್ನು ಕೊಲ್ಲಿಸಿದರೆ ನನಗೇನೂ ಪಾಪ ಬರುವುದಿಲ್ಲ ಅಲ್ಲವೆ? ಏಕೆಂದರೆ ನಾನೇನು ನನ್ನ ಕೈಯಾರ ನಿನ್ನನ್ನು ಕೊಲ್ಲುತ್ತಿಲ್ಲವಲ್ಲ!'' ಎಂದು ಉತ್ತರಕ್ಕಾಗಿ ಕಾದರಂತೆ. ಮೌನವೇ ಅವನ ಉತ್ತರವಾಯಿತಂತೆ.

ನಂತರ ವೈದ್ಯರು - ''ಆಗ ನನಗೆ ಮನುಸ್ಮೃತಿಯಲ್ಲಿ ಮಾಂಸಾಹಾರದ ಬಗ್ಗೆ ಇರುವ ವಿವರಣೆ ಎಂದೋ ಓದಿದ್ದು ನೆನಪಿಗೆ ಬಂತು. ಯಾರು ಪ್ರಾಣಿಯನ್ನು ಮಾರುತ್ತಾರೋ, ಯಾರು ಪ್ರಾಣಿಯನ್ನು ಕೊಳ್ಳುತ್ತಾರೋ, ಯಾರು ಅದನ್ನು ಕೊಲ್ಲುತ್ತಾರೋ, ಯಾರು ಅಡಿಗೆ ಮಾಡುತ್ತಾರೋ, ಯಾರು ಬಡಿಸುತ್ತಾರೋ ಮತ್ತು ಯಾರು ಅದನ್ನು ಭಕ್ಷಿಸುತ್ತಾರೋ ಅವರು ಭಿಕ್ಷುವಾದರೂ ಸರಿ ಭಿಕ್ಷುಕನಾದರೂ ಸರಿ ಎಲ್ಲರೂ ಆ ಪಾಪದಲ್ಲಿ ಪಾಲುದಾರರು.... ಇದೇ ಮಾತು ಮಹಾಭಾರತದ ವನಪರ್ವದಲ್ಲಿ ಉಕ್ತವಾಗಿದ್ದೂ ನನ್ನ ನೆನಪಿಗೆ ಬಂತು....'' ಎಂದು ತಮ್ಮ ಅನುಭವವನ್ನು ವಿವರಿಸಿದರು. ನಾನು ಜ್ಞಾನೋದಯವಾದವನಂತೆ ಮುಖ ಮಾಡಿಕೊಂಡು ವೈದ್ಯರಿಗೆ ವಂದನೆ ಸಲ್ಲಿಸಿ, ತರಕಾರಿ Marketನ ಕಡೆ ಕಾಲು ಹಾಕಿದೆ.



'ಬೈಪಾಸ್' ಅಂಬೊ ಅನುಕೂಲ ಬಂಧು

– ಮಲ್ಲಿಕಾರ್ಜುನ ಹುಲಗಬಾಳಿ

'ಏನ್ ಮಾಡ್ಲಿಕ್ಕೆ ಹತ್ತೇರೀ ಮಾಸ್ತರ್‍ರ್ರೀ....?' ಓಣಿಯ ಜನರಿಗೆಲ್ಲ ಕೇಳಿಸುವಂತೆ ಕೂಗುತ್ತ, ವಿಠ್ಠಲ ನಾನು ಇದ್ದಲ್ಲಿಗೇ ಬಂದಿದ್ದ.

ಬೆಳಗಾಗುತ್ತಿರುವಂತೆಯೇ ಬಂದು ವಕ್ಕರಿಸಿದ ಈ ಪೀಡೆಯಿಂದ ಹೇಗಪ್ಪಾ ಪಾರಾಗೋದು? ಇದಕ್ಕೆ ಏನಾದರೂ ಒಂದು ನೆಪ ಹೇಳಿ ಹೊರ ಹಾಕಬೇಕು ಎಂದೆಲ್ಲ ನಾನು ಯೋಚಿಸುತ್ತಿರಬೇಕಾದರೆ -

'ಹೂಂऽ... ಬರ್ರೀ, ಬರ್ರೀ ವಿಠ್ಠಲರಾವ್, ಬರೋಬ್ಬರ ಟೈಮಕ್ಕऽ ಬಂದೀರಿ ನೋಡ್ರಿ' ರೆಡ್ ಕಾರ್ಪೆಟ್ ಸ್ವಾಗತ ನೀಡಬೇಕೆ, ಈಕೆ. ಕೋಳಿಯಂತೆ ಜಂಬದ ಹೆಜ್ಜೆಗಳನ್ನು ಇಡುತ್ತ 'ಮಾಸ್ತರ್‍ರು ಯಾಕೋ ಸುಮ್ನೇ ಅದಾರಲ್ರೀ... ಅಕ್ಕಾವ್ರ?'' ತಿಪ್ಪೆ ಕೆದರಲು ವಿಠ್ಠಲ ಮುಂದಾಗಿದ್ದ. ಇಷ್ಟು ಸಾಕಾಗಿತ್ತು ಸರಸುಳಿಗೆ.

'ನಿಮ್ಮ ಮಾಸ್ತರ್‍ರಿಗೆ ಒಟ್ಟ ಒಂದ್ ಕೈಯಾಗ ಪುಸ್ತಕ ಇದ್ದರ ತೀರಿತು, ಮನ್ಯಾಗ ಹೆಂಡ್ತಿ-ಮಕ್ಕಳು ಅದಾರಂಬೋ ಖಬರ ಕೂಡ ಇರೋದಿಲ್ಲರೀ...' ಅರ್ಧ ವ್ಯಂಗ್ಯಕ್ಕೆ ಇನ್ನರ್ಧ ಕೋಪ ಬೆರೆಸಿ ಹೇಳಿದಳು. ಅವಳೆಂದೂ ನೇರ ದಾರಿಯಲ್ಲಿ ನುಡಿವವಳಲ್ಲ, ನಡೆವವಳಲ್ಲ.

ಸಾಹಿತಿಯ ಹೆಂಡ್ತಿಗಿರಬೇಕಾದ ಎಲ್ಲ ಸುಲಕ್ಷಣಗಳು ಇವಳಲ್ಲಿ ತುಂಬಿಕೊಂಡಿವೆ. ಪುಸ್ತಕಗಳನ್ನು ಕಂಡರೆ ಸಾಕು, ಸವತಿಯನ್ನು ಕಂಡಷ್ಟು ಸಿಡಿಸಿಡಿ ಮಾಡುತ್ತಾಳೆ. ನಾನು ಏನಾದರೂ ಒಂದಿಷ್ಟು ಓದತೊಡಗಿದರೆ ವಟವಟ ಗುಟ್ಟುತ್ತ ಹಿಡಿಶಾಪ ಹಾಕುತ್ತಲೇ ಇರುತ್ತಾಳೆ. ಇನ್ನು ಕೈಯಲ್ಲಿ ಪೆನ್ನು ಹಿಡಿದು ಬರೆಯತೊಡಗಿದರೆ ತೀರಿತು, ಆ ಸಾಕ್ರೇಟಿಸ್‌ನ ಹೆಂಡತಿ ಝಾಂತಿಡೆಯ ಹಾಗೆ ಕೂಗಾಡಿ, ರಂಪ ಮಾಡುತ್ತಾಳೆ. ಇಂಥ ಸಮಯದಲ್ಲಿ ಮನೆಗೆ ಯಾರಾದರೂ ಬರಬೇಕು, ಆಗೆಲ್ಲ ಅವಳಿಗೆ ತುಂಬ ಬಲ ಬರುತ್ತದೆ. ನನ್ನ 'ಪೂಜೆ' ವೀರಾವೇಶದಿಂದ ಮಾಡುತ್ತಾಳೆ. ಈಗ 'ಬರೋಬ್ಬರ ಟೈಮಕ್ಕೇ' ಬಂದಿದ್ದಾನೆ ನನ್ನ ಮಾಜಿ ವಿದ್ಯಾರ್ಥಿ ವಿಠ್ಠಲ.

ಹೀಗೆಲ್ಲ 'ಬರೋಬ್ಬರ ಕ್ರಮಕ್ಕೆ' ಬಂದು ದರ್ಶನ ನೀಡುವ ಭಗವಂತರೆಂಬ ನನ್ನ ಶಿಷ್ಯರ ಮುಂದೆ ನನ್ನನ್ನು ಪರಾಜಿಗಟ್ಟು ಸನ್ಮಾನಿಸುವುದು ನನ್ನವಳ ಸತ್ಕಾರ್ಯಗಳಲ್ಲಿ ಒಂದು. ಆಗೆಲ್ಲ ಸಾಕಷ್ಟು ಕಿರಿಕಿರಿಯಾಗುತ್ತಿದ್ದರೂ... ನನಗೆ ಏನೂ ಆಗುವದಿಲ್ಲ ಎಂಬುದನ್ನು ತೋರಿಸಲು, 'ಹ್ಹಿ...ಹ್ಹಿ...ಹ್ಹಿ' ಎಂಬ ದೇಶಾವರಿ ನಗೆಯನ್ನೂ ಮುಖದಲ್ಲಿ ತುಂಬಿಕೊಳ್ಳುತ್ತೇನೆ. (ಮತ್ತೆ ಹ್ಯಾಪು ಮುಖಮಾಡಿ ಇನ್ನಷ್ಟು ಅಗ್ಗವಾಗಬೇಕೆ?)

'ಏಽ ಬಿಡ್ರೀ ಅಕ್ಕಾವ್ರ, ನನಗ್ಗೊತ್ತಿಲೇನ್ರಿ ನಮ್ ಮಾಸ್ತರ ಸ್ವಭಾವಾ....., ಊರಿಗೆ ಊರೇ ಬೆಂಕಿ ಹತ್ತಿ ಸುಡತಿದ್ದರೂ ತಮ್ಮ ಪುರ್ತೆಕ ತಾವು ನಿಶ್ಚಿಂತ ಇರಾವ್ರು, ಊರ ಹೊರಗಿನ ಹಣ್ಮಂತದೇವರಂಗ', ತನ್ನದೊಂದಿಷ್ಟು ಹೂವು ಏರಿಸುತ್ತ 'ಪೂಜೆ'ಗೆ ರಂಗು ತಂದಿದ್ದ ವಿಠ್ಠಲ.

'ಅಂದಾಂಗ, ಅಕ್ಕಾವ್ರ ಸುದ್ದಿ ಕೇಳೀರೇನ್ರಿ...?' ಊರ ಉಸಾಬರಿಗೆ ಮುಂಚೆ ಪ್ರಿಯ್ಯಾಂಬಲ್ ಪೀಠಿಕೆ ಹಾಕಿದ ವಿಠ್ಠಲ - ಎಂದಿನಂತೆ. ಅವನು ಹೀಗೆ ಕೇಳುವದಕ್ಕೂ, ನನ್ನವಳು - 'ಯಾವ ಸುದ್ದೀರಿ ವಿಠ್ಠಣ್ಣ? ನಾನಂತೂ ಕೇಳಿಲ್ಲ ಬಿಡ್ರಿ.... ಏನದು? ಅದೇನಿದ್ದರೂ ನೀವು ಹೇಳಿದಾಗೇ ಗೊತ್ತಾಗ್ಬೇಕಲ್ಲರಿ. ಇವ್ರಂತೂ ನಿಮಗೇ ಗೊತ್ತಲ್ಲಾ... ತಾವಾತು, ಆ ಸುಡಗಾಡ ತಮ್ಮ ಸಾಹಿತ್ಯ ಆತು. ಇದ್ನ ಬಿಟ್ಟರಽಽ ಉಳಿದದ್ದಕ್ಕೆಲ್ಲಾ ಸಾಂಬಶಿವಾ...' ಎಂದೆಲ್ಲ ಹೇಳುವುದು ಇದ್ದದ್ದೆ.

ಈವತ್ತು ವಿಠ್ಠಲ ತಂದಿದ್ದು ಬೈಪಾಸ್ ಸುದ್ದಿ, 'ಈಗ ಊರಾಗ ಯಾರ್ನ ಕೇಳಿದ್ರೂ ಅವರೆಲ್ಲರ ಬಾಯಾಗ ಬರೇ ಬೈಪಾಸದ್ದೇ ಸುದ್ದಿ ನೋಡ್ರಿ ಅಕ್ಕಾವ್ರ...' ವಾರ್ತೆಯ ಮುಖ್ಯಾಂಶ ಬಿತ್ತರಿಸಿದ.

'ಬೈಪಾಸ್ಽಽ...!? ಹಂಗಂದ್ರ ಏನ್ರೀ ವಿಠ್ಠಣ್ಣಾ?'

'ಛೇ... ಹೋಗ್ರೀ ನಿಮ್! ಅಷ್ಟೂ ಗೊತ್ತಿಲ್ಲರ್ಯ? ಬೈಪಾಸ್ ಅಂತಂದ್ರ ಬೈಪಾಸ್.... ಬೈ...ಪಾ....ಸ...ರೀ.... ಅಂತಂದ್ರ ರಸ್ತಾರ್ರೀ....' ವಿಠ್ಠಲ ತಡಬರಿಸಿದ.

ಈಗ ನಾನು ಮಧ್ಯೆ ಪ್ರವೇಶಿಸುವದರ ಅಗತ್ಯ ಕಂಡಿತು. ನಮ್ಮ ಊರ ಮೂಲಕ ಹಾಯ್ದು ಹೋಗಿರುವ ರಾಜ್ಯ ರಸ್ತೆ ಹೆದ್ದಾರಿಯು ವಾಹನ ಸಂಚಾರಕ್ಕೆ ತೀರ ಇಕ್ಕಟ್ಟಾಗಿರುವುದರಿಂದ, ಊರ ಹೊರವಲಯದಲ್ಲಿ ಬೈಪಾಸ್ ರಸ್ತೆ ನಿರ್ಮಾಣವಾಗತೊಡಗಿತ್ತು. ಅನೇಕರು ತಮ್ಮ ಒಂದಿಷ್ಟು ಹೊಲ-ತೋಟ ಕಳೆದುಕೊಂಡಿದ್ದರು. ಅದಕ್ಕಾಗಿ ಬರಲಿರುವ ಪರಿಹಾರ ಧನ, ಆಗಬಹುದಾದ

ಲಾಭ - ಹಾನಿಯ ಲೆಕ್ಕಾಚಾರಗಳು ಊರವರ ನಾಲಿಗೆಗೆ ಆಹಾರ ಒದಗಿಸಿದ್ದವು. ನಾನು ಇದನ್ನೆಲ್ಲ ವಿವರಿಸಿದ ಮೇಲೆ, ನನ್ನವಳು 'ಯುರೇಕಾ ಯುರೇಕಾ' ಎಂಬರ್ಥದಲ್ಲಿ 'ತಿಳೀತು... ತಿಳೀತು. ಈ ಬೈಪಾಸ್ ಅಂತಂದ್ರ ಏನಂಬೋದು ಈಗ ತಿಳೀತು ಬಿಡ್ರಿ' ಎಂದು ಕೂಗಿದ್ದಳು. ಒಮ್ಮೆಗೆ ಮೂರು ಲೀಟರ್ ಸೀಮೆ ಎಣ್ಣೆ ಸಿಕ್ಕಷ್ಟು ಖುಷಿಗೊಂಡಿದ್ದಳು ಆಕೆ.

'ಹಂಗಿದ್ರ ಏನ್ ತಿಳೀತು ಹೇಳು ನೋಡೋಣ?' ಕ್ಲಾಸಿನಲ್ಲಿ ಹುಡುಗರನ್ನು ಕೇಳುವ ಹಾಗೆ, ನನ್ನವಳನ್ನು ಪ್ರಶ್ನಿಸಿದ್ದೆ.

'ಅಯ್ಯSS... ಅಷ್ಟೂ ತಿಳಿಯೂದಿಲ್ಲರS! ಈಗಿರೋ ಒಂದ್ ವ್ಯವಸ್ಥಾದಿಂದ ಹಂಗ ಹೇಳಿಕೊಳ್ಳುವಂಥಾ ಕೆಲಸ ಆಗದೇ ಹೋದರೇ... ಅದಕ್ಕೊಂದು ಬ್ಯಾರೇ ಹಾದಿ ನೋಡ್ಕೊಳ್ಳೊದಕ್ಕ ಬೈಪಾಸ್ ಅಂತಾರ.... ಹೌದಲರ್ರೀ...?' ನನಗೇ ಮರುಪ್ರಶ್ನೆ ಎಸೆದಿದ್ದಳು.

'ಭೇಷ್! ಭೇಷ್! ಅಂತೂ ಈಗಾದ್ರೂ ತಲಿಗೆ ಹತ್ತಿತುಬಿಡು' ಬೆನ್ನು ಚಪ್ಪರಿಸುತ್ತ ಹೇಳಿದರೆ,

'ಏSS... ಬಿಡ್ರೀ ಮಾಸ್ತರ್ರೀ... ಇದರಾಗೇನಂಥಾದ್ದು, ಭಾರಿ ಐತಿ. ನಾವು ದಿನಾಲು ಇದನ್ನು ಪ್ರ್ಯಾಕ್ಟಿಕಲ್ ಆಗಿ ಸಾಕಷ್ಟು ಸಲ ಮಾಡ್ತಿರ್ತೀವಿ' ಎಂದು ವಿಠ್ಠು ಎದೆಯುಬ್ಬಿಸಿ ಹೇಳಿದಾಗ, ತಬ್ಬಿಬ್ಬಾಗುವ ಸರದಿ ಈಗ ನನ್ನದಾಗಿತ್ತು. 'ಅದ್ಯಾಂಗೋ ವಿಠ್ಠೂ?' ಶಿಷ್ಯನ ಪ್ರಕಾಂಡ ಪಾಂಡಿತ್ಯ ತಿಳಿಯುವ ಕುತೂಹಲ ನನಗೆ. ಈ 'ಬೈಪಾಸ್'ಗೆ ಹೊಸದೊಂದು ಭಾಷ್ಯ ಬರೆಯಲು ಆತ ಮುಂದಾದ.

'ಈಗ ನೀವೇ ನೋಡ್ರಿ ಮಾಸ್ತರ್ರೀ, ಬರೋ ಸಂಬಳ ಸಾಲದೇ ಹೋದಾಗ, ಟೇಬಲ್ ಕೆಳಗಿನ ಬೈಪಾಸ್ ಮೂಲಕ ಮಾಮೂಲು ಬರೋದಿಲ್ಲರ್‍ಯ! ಆಫೀಸ್‌ನೊಳಗ ಬಾಸ್‌ಕಡಿಂದ ಆಗಲಾರದ ಕೆಲಸಾನ್ನ, ಮನಿಯೊಳಗ ಅಮ್ಮಾವ್ರ ಕಡಿಂದ ಮಾಡಿಸಿಕೊಳ್ಳೋದು, ನ್ಯಾಯ ಮಾರ್ಗದಿಂದ ಪರೀಕ್ಷೆ ಪಾಸ್ ಆಗೋದು ಕಷ್ಟ ಅಂತ ಗೊತ್ತಾದಾಗ ನಮ್ಮ ವಿದ್ಯಾರ್ಥಿಗಳು ಕಾಪೀ ಮಾಡುವ ಮೂಲಕ ಬೈ-ಪಾಸ್ ಹಾದಿ ಕಂಡುಕೊಳ್ಳೋದು... ಇವೂ ಕೂಡ ಬೈಪಾಸ್‌ದ ಉದಾಹರಣೆಗಳೇ ಅಲ್ಲೇನ್ರಿ?' ವಿಠ್ಠಲನ ಅದ್ಭುತ ಸಂಶೋಧನೆಗೆ ತಲೆದೂಗದೆ ಇರಲಿಕ್ಕಾದೀತೆ!

'ಹಾಂ...ಹೌದೌದು.... ಬರೋಬ್ಬರೀ ಹೇಳಿದ್ರಿ ವಿಠ್ಠಣ್ಣಾ! ಕ್ಷಣಸ್ಫೂರ್ತಳಾದಂತೆ ನರಸು ಉಮ್ಮೇದಿಯಿಂದ ಉಸರಿಸತೊಡಗಿದ್ದಳು.

'ಮನಿಯೊಳಗ ಹಾಲೋ ಅಥ್ವಾ ಚಹಾಪುಡೀನೋ ತೀರಿದಾಗ, ಆಗ

ಏನಾದ್ರೂ, ಒಂದ್ ನೆವಾ ಮಾಡ್ಕೊಂಡು ಬಾಜು ಮನೆಯವರಲ್ಲಿಗೆ ಸರಿಯಾಗಿ ಚಹಾದ ವ್ಯಾಳೇಕ್ಕSS ಹೋಗೋದೂ ಒಂದ್ ನಮೂನಿ ಬೈಪಾಸ್ ಅಲ್ಲೇನು? ಮತ್ತ, ಮತ್ತ, ಒಮ್ಮೊಮ್ಮೆ ನನ್ನ ಮ್ಯಾಲ ನಿಮಗ ಕಂಡಾಪಟ್ಟೆ ಸಿಟ್ಟು ಬಂದಾಗೆಲ್ಲಾ, ನನಗ ಏನೂ ಅನ್ನಲ್ಲ, ಪಾಪ ಹುಡುಗರ ಮ್ಯಾಲ ಸಿಕ್ಕಾಪಟ್ಟೆ ಹರಿಹಾಯ್ತಿರ್ತಿರಲ್ಲಾ... ಅದೂ ಕೂಡಾ ಬೈಪಾಸ್ ಇದ್ದಾಂಗನೆ... ಸರಸು ಕುಣಿಯುತ್ತಾ ಹೇಳುತ್ತಿದ್ದಾಗ, ನನಗೆ ನಿಜಕ್ಕೂ ಸಿಟ್ಟು ಬಂದರೂ, ಮತ್ತೆ ಅದೇ ಝ್ಹು...ಝ್ಹು...ಝ್ಹು.... ದೇಶಾವರಿ ಬೈಪಾಸ್ ಹಾದಿ ಹಿಡಿದೆ.

'ಮನಿಯೊಳಗ ಹೆಂಡ್ತಿ ಕೂಡ ಜಗಳಾಡಿ, ಧುಸುಮುಸು ಆಗಿ, ಊಟಕ್ಕೂ ಸಂಚಕಾರ ಬಂದಾಗ, ನಾನೊಬ್ಬನೇ ತುಡುಗಿಲೇ ಹೋಟೆಲಿಗ್ಹೋಗಿ ಉಂಡ ಬರೋದು ಕೂಡ ಬೈಪಾಸ್ ಆಗ್ತದ. ಅಷ್ಟೇ ಯಾಕ್ರಿ ಮಾಸ್ತರ್ರಿ ಕಪ್ಪು ಹಣಾನ ಬಿಳೀದು ಮಾಡೋದು, ಇಲೆಕ್ಷನ್ನದೊಳಗೆ ಬಿದ್ದಾವರ್ನ ಯಾವುದಾದರೂ ಒಂದು ಬೋರ್ಡಿಗೆ ನಾಮಕರಣ ಮಾಡೋದು, ಇಲ್ಲಾ ಎಮ್ಮೆಲ್ಸಿ ಮಾಡೋದು ಇವು ಕೂಡಾ 'ಬೈಪಾಸ್' ದೊಳಗೇ ಹಾಯ್ತಾವರೀ' ವಿಠ್ಠಲ ಮತ್ತಷ್ಟು ವಿವರಣೆ ನೀಡಿದ.

'ಹಂಗಾದ್ರ, ಕುಣೀಲಿಕ್ಕೆ ಬರಲಾರದವಳು ನೆಲಾ ಡೊಂಕ ಅಂತ ನೆವಾ ಹೇಳೋದು, ಕೈಗೆ ಸಿಗಲಾರದ ದ್ರಾಕ್ಷಿಗೆ ನರಿ ಹುಳಿ ಅಂತ ಹೇಳೋದು ಕೂಡ ಬೈಪಾಸ್ ಅಂತ ಹೇಳಬೇಕೇನು?' ಇನ್ನೊಂದಿಷ್ಟು ವಿಠ್ಠಲನನ್ನು ಕೆಣಕಿದೆ.

'ಯಾಕಾಗಬಾರದು...? ಯಾಕಾಗಬಾರದು ಅಂತೀನಿ. ಅಲ್ಲಾ, ಸಾಲೀ ಪುಸ್ತಕಾ (ಟೆಕ್ಸ್ಟ್‌ಬುಕ್ಸ್) ಅರ್ಥಾ ಆಗ್ಲಿಕಂತ್ರಂದ್ರ ನೀವು ಆ ಗೈಡು - ನೋಟ್ಸ್, ಓದಿ ತಿಳ್ಕೊತಿರಲ್ಲಾ ಅದೂ ಕೂಡ ಬೈಪಾಸ್ ಗೊತ್ತಾತೇನ್ರೀ...?' ಸರಸು ಕೈ-ಬಾಯಿ ಕುಣಿಸುತ್ತ ಹೇಳತೊಡಗಿದ್ದಳು. 'ಒಟ್ಟಿನ ಮ್ಯಾಲ ಹೇಳೋದಂದ್ರ ನಮ್ಮ ಅನುಕೂಲಕ್ಕ ಯಾವುದು ಆಗ್ತೈತಿ ನೋಡ್ರಿ ಅದೇ ಬೈಪಾಸ್....' ಜಡ್ಜ್‌ಮೆಂಟ ನೀಡಿಬಿಟ್ಟಳು.

'ಮತ್ತ ಈಗಿರೋ ಒಬ್ಬ ಹೆಂಡ್ತಿಯಿಂದ ಅನಕೂಲ ಆಗದಿದ್ದರ... ಮತ್ತೊಬ್ಬಾಕಿನ ಕಟ್ಟಿಕೊಳ್ಳೋದೂ ಬೈಪಾಸ್ ಯಾಕಾಗಬಾರದು?' ಅಂತ ಕೇಳಬೇಕೆನಿಸಿದರೂ, ಎದೆಯಾಗದೆ, ನನ್ನ ಮನಸಿನೊಳಗೇ ಅದಕ್ಕೊಂದು 'ಬೈಪಾಸ್' ನಿರ್ಮಿಸಿ, ಮೌನನಾದೆ.

ಹೌದು, ನಿಜಕ್ಕೂ ಈ ಬೈಪಾಸ್ - ಒಬ್ಬ ಅನಕೂಲ ಬಂಧು, ಏನಂತೀರಿ?

★★★

ಒಂದು ಕೈನಲ್ಲಿ ಕೊಟ್ಟು...

– ನಾಗೂಶ್ರೀ ಸೂರಿ

ದಿನನಿತ್ಯ ಮಾಡೋ ಹಾಗೆ ಅವತ್ತು ರಾತ್ರೀ ಕೂಡ ರಂಗಧಾಮಯ್ಯ ಕ್ಲಬ್ಬಿಂದ ಬಂದವನೆ ಕೈಕಾಲು ತೊಳಕೊಂಡು ನಮಸ್ಕಾರ ಮಾಡೋಕ್ಕೆ ಅಂತ ದೇವರ ಗೂಡಿನ ಹತ್ರ ಹೋದ.

''ಯಾವ ದೇವರದ್ದೇ ಈ ಹೊಸಾ ಪಟ, ಜಾನಕೀ? ಅಲ್ಲಾ, ಗೊತ್ತಿರೋ ನೂರೆಂಟು ದೇವರುಗಳನ್ನ ಮೆಚ್ಚಿಸೋಕೇ ಅಂತ ಪೂಜೆ ಪುನಸ್ಕಾರ, ತೀರ್ಥಯಾತ್ರೆ ಅಷ್ಟೊಂದು ಮಾಡಿದ್ದೇ ಮೂರು ಕಾಸಿನ ಉಪಯೋಗಕ್ಕೆ ಬರ್ಲಿಲ್ಲ. ಅಂಥದ್ರಲ್ಲಿ ಇದ್ಯಾವದೋ ಹೊಸ ದೇವರನ್ನ ಹಚ್ಕೊಂಡು ಬಂದಿದ್ಯಲ್ಲ...''

''ನನ್ನ ಚಿಕ್ಕಮ್ಮ ವಿಶಾಲೂ ಕೊಟ್ಟಿರೋದು ರೀ, ಆ ಪಟಾ. ಅದೆಂಥದೋ ಹೆಸರು ಹೇಳಿದ್ಳು, ಮರ್ತ್ಹೋಗಿದೆ... ಇದು ಒಂದು ರೀತೀ ಜೂನಿಯರ್ ದೇವರಂತೆ... ಬಹಳ ಜನಕ್ಕೆ ಇವನು ಇರೋದು ಗೊತ್ತೇ ಇಲ್ಲವಂತೆ... ದೊಡ್ಡ ದೊಡ್ಡ ದೇವರುಗಳ ಥರಾ ಇವನೂ ಕೇಳಿದ್ದನ್ನೆಲ್ಲಾ ಕೊಡ್ತಾನಂತೆ. ಅವರುಗಳು ಕೊಡೋ ಅಷ್ಟು ಇಲ್ದೇ ಇರಬಹುದು.... ಆದ್ರೆ ಇಂಥಾದ್ದು ಕೊಡೂ ಅಂತ ಇವನನ್ನ ಕೇಳೋರು ಜಾಸ್ತಿ ಜನ ಇಲ್ದೇ ಇರೋದ್ರಿಂದ ಅಲ್ಲಿ ಥರ waiting period ಇರೋಲ್ಲವಂತೆ, ಇಷ್ಟಾರ್ಥ ಸಿದ್ಧೀಗೆ''

''ಆಯ್ತು, ಮೂರುಕಾಸು ಹೆಚ್ಗೇ ಬರತ್ತೆ ಅನ್ನೋದಿದ್ರೆ, ಯಾಕೆ ಬೇಡ ಅನ್ನಲಿ? ... ಇದಕ್ಕೆ ಯಾವ ಥರಾ ಪೂಜೆ ಮಾಡಬೇಕಂತೆ? ... ಉಪವಾಸ, ನೈವೇದ್ಯ ಅಂತ ಏನಾದ್ರೂ ಕಟ್ಲೆ ಇದ್ಯಾ...?''

''ಅಂಥಾದ್ದು ಏನೂ ಇಲ್ಲವಂತೆ ರೀ. ದಿನಾ ಭಕ್ತಿಯಿಂದ ಒಂದು ಅರ್ಧ ಮೊಳ ಕಟ್ಟಿದ್ ಹೂವು, ತಪ್ಪಿದ್ರೆ ಒಂದೋ ಎರಡೋ ಹಿಡಿ ಬಿಡೀ ಹೂವು ಅಷ್ಟನ್ನ ಅರ್ಪಣೆ ಮಾಡಿದ್ರೆ ನಾಕಂತೆ... ಅದೇನೋ ಗಾದೆ ಇದ್ಯಲ್ಲ, ಅಷ್ಟು ಕಂಡ್ರಾ ಕ್ರಿಷ್ಣಂ ಭಟ್ರೆ ಅಂತ, ಹಾಗಿದ್ಯಂತೆ ಈ ದೇವರ ಹಾಲಿ ಸ್ಥಿತಿ... ಆ ಹೂವ ತರೊ ದೇವೀರಿಗೆ ನಾನು ಆಗಲೇ ಹೇಳಿಟ್ಟಿದ್ದೀನಿ... ನಾಳೇಯಿಂದಾನೆ ಕಟ್ಟಿದ್ ಹೂವು ತರ್ತಾ ಇದ್ದಾಳೆ...'

ಮಾರನೇ ದಿನ ಮಡಿ ಉಟ್ಕೊಂಡು ದೇವೀರೀ ತಂದಿದ್ದ ಆ ಹೂವನ್ನ ಏರಿಸೋಕ್ಕೆ ಹೋದಾಗ ಯಾಕೋ ಕಾಣೆ, ಆ ಪಟ ಒಂದು ಸಾರಿ ಉರಟ್ಕೋತು.

ಛತ್, ಅಪಶಕುನ ಆಯ್ತಲ್ಲ ಅಂದುಕೊಂಡು ಇನ್ನೊಂದು ಸಲ ಟ್ರೈ ಮಾಡಿದಾಗ್ಲೂ ಹಾಗೇ ಆಯ್ತು. ಕೊನೇಗೆ ಮೂರನೇ ಸಲಕ್ಕೇನೇ ಅದು ಸರಿ ಹೋದದ್ದು.

ಯಾಕೋ ಪ್ರಥಮ ಚುಂಬನಂ ದಂತಸಾಶನಂ ಅಂತ ಆಯಿತಲ್ಲ ಅನ್ನಿಸಿದ್ರೂ ನಾಳೆಯಿಂದ ಸರೀಹೋಗಬಹುದೂ ಅಂದುಕೊಂಡ ಆ ನಾಳೇನೂ ಹಾಗೆ, ಅದರ ನಾಳೇನೂ ಹಾಗೆ ಅದರ ನಾಳೇಗೆ ನಾಳೇನೂ ಹಾಗೆ. ನಿತ್ಯಾನೂ ಹೀಗೇ ಆಗತಾ ಇದ್ದದ್ದನ್ನ ನೋಡಿ ರಂಗಧಾಮಯ್ಯನಿಗೆ ಒಂದು ಅನುಮಾನ ಬಂತು - by chance ಈ ದೇವೀರೀ ತಂದು ಕೊಡತಾ ಇರೋ ಆ ಹೂವಿನಲ್ಲೇ ಏನಾದ್ರೂ ದೋಷ ಇರಬಹುದಾ?

ಅವತ್ತಿನ ದಿನ ದೇವೀರಿ ಬಂದಾಗ ರಂಗಧಾಮಯ್ಯನೇ ಅವಳನ್ನ ಕೇಳಿದ:

"ನಿನ್ನ ಮಕ್ಕಳ ಮೇಲೆ ಆಣೆ ಇಟ್ಟು ಹೇಳು, ನಮ್ಮ ಮನೇಗೆ ನೀನು ಕೊಡತಿರೋ ಈ ಹೂವನ್ನ ಎಲ್ಲಿಂದ ತರತಾ ಇದ್ದೀಯ?"

"ಐ, ಅದಕ್ಕೆ ಮಕ್ಕಳ ಮೇಲೆ ಆಣೆ ಯಾಕೆ ಬೇಕು? ನನ್ನ ಗಂಡನ್ನ ಒಸದಾಗಿ ಮಂತ್ರಿ ಆದರಲ್ಲ, ಆ ಶಿವಯ್ಯನೋರು, ಅವರ ಆಫೀಸ್ನಾಗೆ ಪಿವನ್ನೂ ಅಂತ ಆಕವ್ರೆ. ನಿತ್ಯಾ ಅವರು ಎಲ್ಲಾದ್ರೂ ಓಗಿ ಆರಾ ಆಕಿಸ್ಕೊಂಡು ಬರ್ತಾ ಇರ್ತಾರೆ. ಅದನ್ನ ಇವ್ನು ಇಸಕೊಂಡ್ ಬಂದು ನನ್ ತಾವ ಕೊಡತಾನೆ.

ಊವಾ ಒಂದೇ ಸರತಿ ತಾನೇ ಆಗಿರೋದು? ಚನ್ನಾಗೇ ಇರತೈತೆ. ನಾನು ಅದ್ನೇ ಕುಯ್ದು ಮನೆ ಮನೆಗೂ ಕೊಡ್ತಾ ಇವ್ನಿ..."

"ಅಯ್ಯೋ ದರಿದ್ರದೋಳೇ! ಆ ಮಂತ್ರೀಗ್ ಹಾಕಿದ್ ಎಂಜಲು ಹಾರಾನ್ನ ದೇವ್ರಿಗ್ ಹಾಕ್ತಾರೇನೇ...?"

"ಐ, ಯಾಕೆ ಆಗಬಾರದು? ಮಂತ್ರೀಗ್ ಆರಾ ಆಕಿದ್ರೆ ಆಗ್ದೇ ಇರೋ ಕೆಲ್ಸಾ ದೇವ್ರಿಗ್ ಆಕಿದ್ರೆ ಆಯ್ತದಾ, ಈಗಿನ್ ಕಾಲದಾಗೆ...?"

ಅವಳು ಹೇಳೋದು ಒಂದು ರೀತೀಲಿ ನಿಜಾನೇ ಅಂತ ಅನಿಸಿದ್ರೂ ಅವಳನ್ನ ಬಿಡಿಸಿ ರಂಗಧಾಮಯ್ಯ ಮಾರನೇ ದಿನದಿಂದ ತಾನೇ ಬೆಳಿಗ್ಗೆ ಅಷ್ಟು ಹೊತ್ಗೇ ಹೋಗಿ ಮಾರ್ಕೆಟ್ಟಿಂದಾನೇ ಕಟ್ಟಿದ ಹೂವು ತರೋ ಪರಿಪಾಠಾ ಇಟ್ಕೊಂಡ. ಆವಾಗನಿಂದ ಆ ದೇವರು "ರಾಂಗ್" ಮಾಡೋದು ನಿಂತು ಹೋಯಿತು.

ಆದ್ರೆ, ಒಂದು ವಾರ ಹೀಗೆ ಮಾಡಿದ ಗಂಡ ಆಮೇಲಿಂದ ಹೂವ ತರೋಕೆ ಹೋಗೋವಾಗ ಒಂದು ಕೈನಲ್ಲಿ ಬುಟ್ಟೀ, ಇನ್ನೊಂದು ಕೈನಲ್ಲಿ ವರ್ಷಗಳ ಹಿಂದೆ ಕಾಶೀಯಾತ್ರೇನಲ್ಲಿ ಸಿಕ್ಕಿತ್ತಲ್ಲ ವಾಕಿಂಗ್ ಸ್ಟಿಕ್ಕು, ಅದನ್ನ ಹಿಡಕೊಂಡು ಹೋಗೊಕ್ಕೆ

ಶುರೂ ಮಾಡಿದಾಗ ಜಾನಕಮ್ಮನಿಗೆ ಯಾಕೆ ಹೀಗೆ ಅಂತ ಅರ್ಥವಾಗಲಿಲ್ಲ. ಯಾಕೆ ಅಂತ ಕೇಳಿದ್ದಕ್ಕೆ ಅವನ ಉತ್ತರ:

''ಬೆಳಗಿನ ಕತ್ತಲು ಹೊತ್ನಲ್ಲಿ ರಸ್ತೇನಲ್ಲಿ ಪೋಲೀ ನಾಯಿಗಳ ಕಾಟ. ಅದನ್ನ ತಪ್ಪಿಸ್ಕೊಳ್ಳೋಕ್ಕೆ ಕೈನಲ್ಲಿ ಕೋಲಿದ್ರೆ ವಾಸಿ, ಅದಕ್ಕೇನೆ....''

''ಮತ್ತೆ ಆ ಬುಟ್ಟೀ?...''

''ನಿನ್ನೆ ದಿನ ಪೇಪರ್ನಲಿ ಕೊಟ್ಟಿದ್ರೆಲ್ಲ, ಇವತ್ತೋ ನಾಳೇನೋ ಮುಖ್ಯಮಂತ್ರಿಗಳು cabinet expansion ಮಾಡಬಹುದಂತೆ, ಒಂದು ಎಂಟು ಹತ್ತು ಹೊಸ ಮುಖಗಳನ್ನು induct ಮಾಡಿಕೊಂಡು ... ಅದೇನಾದ್ರೂ ಆದ್ರೆ ಮಾರ್ಕೆಟ್ ತುಂಬಾ ಅವರುಗಳಿಗೆ ಹಾಕಿದ ತಂಗಳು ಹಾರಗಳೇ ತುಂಬಿ ಹೋಗಬಹುದಲ್ಲ... ಕಟ್ಟಿದ ಹೂವಿನ ಬದಲು ಬಿಡಿ ಹೂವನ್ನೇ ತಂದೇ ಅಂದರೆ ಆ ಭಯ ಇರೊಲ್ಲವಲ್ಲ... ಅದಕ್ಕೆ ಈ ಬುಟ್ಟಿ...''

ಅವನು ಬುಟ್ಟೀನಲ್ಲಿ ತುಂಬಿಸ್ಕೊಂಡು ಬರತಿದ್ದ ಬಿಡಿ ಹೂವು ಎಷ್ಟು fresh ಆಗಿರತಿತ್ತು ಅಂದ್ರೆ ಎಂಥಾ ಕಂಜೂಸ್ ದೇವರೇ ಆದ್ರೂ ಸರೀನೆ, ಕೈ ಧಾರಳ ಮಾಡಬೇಕು, ಹಾಗಿರೋದು. ಅಂತಂದ ಮೇಲೆ ರಂಗಧಾಮಯ್ಯನ ಸ್ಥಿತಿಗತಿ ಸುಧಾರಿಸ್ಕೋತಾ ಬರೋದ್ರಲ್ಲಿ ಏನು ಆಶ್ಚರ್ಯ?

ಯಾವತ್ತೋ ಅವನು ಪೋಸ್ಟ್ ಆಫೀಸ್ನಲ್ಲಿ monthly income scheme ನಲ್ಲಿ ಡಿಪಾಸಿಟ್ ತೆಗೆದಿದ್ದ. ಅದಕ್ಕೆ ಸಂಬಂಧಪಟ್ಟ ಲಾಟರೀನಲ್ಲಿ ಅವನಿಗೆ ಹತ್ತು ಸಾವಿರ ಬಂತು ಮೊದಲನೆ ಸಲ. ಕೊಂಚ ದಿನ ಆಗೊಕ್ಕಿಲ್ಲ, ಅವನ ಮಗ ಕುಡಿದಿದ್ದ ಪೆಪ್ಸಿ ಬಾಟಲ್‌ನಲ್ಲಿ ಮೋಪೆಡ್ ಬಹುಮಾನದ್ದು ಚೀಟಿ ಸಿಕ್ತು. ಹೀಗೇನೆ ಹತ್ತು ದಿನಕ್ಕೆ ಒಂದು ಸಲ, ಇಪ್ಪತ್ತು ದಿನಕ್ಕೆ ಒಂದು ಸಲ ಅನ್ನೋ ರೀತೀಲಿ ಒಂದೇ ಸಲ ಭಾರಿಯಾಗಿರೋದು ಅನ್ನೋದು ಏನಾದ್ರೂ ಬರದೇ ಇದ್ರೂನೂವೆ ಮನೇನಲ್ಲಿ ಫ್ರಿಜ್ಜು, ಮ್ಯೂಸಿಕ್ ಸಿಸ್ಟಂ, ಅನ್ನೋವೆಲ್ಲ ತುಂಬಾಕೋತಾ ಬಂದವು -

Every dog has its day ಅಂತನ್ನೋ ಗಾದೆ ಎಷ್ಟು ಸತ್ಯಾನೋ ತಿಳೀದು, ಆದ್ರೆ ನನ್ನ ಮಟ್ಟಿಗಂತೂ Every god has his day ಅನ್ನೋದಂತು ನಿಜ ಅಂದುಕೊಂಡು ರಂಗಧಾಮಯ್ಯ ಸಂತೋಷವಾಗಿದ್ದ.

ಒಂದು ಆರು ತಿಂಗಳ ಕಾಲ ಒಂದೇ ಸಮನೆ ಈ ರೀತಿ ಮನೇನಲ್ಲಿ ಸಮೃದ್ಧಿ ಅನ್ನೋದು ನಡೀತಾ ಇರೋವಾಗ ಅವನಿಗೆ ಅನ್ನಿಸ್ತು - ಅಲ್ಲ, ಇಷ್ಟೆಲ್ಲ ಅದೃಷ್ಟ ಖುಲಾಯಿಸಿಕೊಂಡಿರೋವಾಗ ರಾಮೇಶ್ವರ, ಕನ್ಯಾಕುಮಾರಿ ಅನ್ನೋವನ್ನೆಲ್ಲ

ಒಂದು ಸಲ ಯಾತ್ರೆ ಮಾಡಿಕೊಂಡು ಬಂದ್ರೆ ಒಳ್ಳೇದಲ್ವೆ, ಹ್ಯಾಗಿದ್ರೂ ಜಾನಕಿ ತಂಗಿ ಗಂಡ ರಾಮೇಶ್ವರದಲ್ಲೇ ಇದಾರೆ ಬನ್ನಿ, ಬನ್ನಿ ಅಂತ ಕರೀತ್ಲೆ ಇರ್ತಾರೆ ಅಂದುಕೊಂಡು ಸಂಸಾರ ಸಮೇತ ರೈಲು ಹತ್ತಿದ.

ಆದ್ರೆ ಅವರು ಅಲ್ಲಿ ಇಳಿಯೋ ಹೊತ್ಗೇನೇ ಬೆಂಗಳೂರಿಂದ ಟೆಲಿಫೋನ್‌ನಲ್ಲಿ ಸುದ್ದಿ ಬಂದಿತ್ತು - ಯಾರೋ ಮನೆ ಬಾಗಿಲು ಒಡೆದು ಒಂದಿಷ್ಟು ಸಾಮಾನು ದೋಚಿಕೊಂಡು ಹೋಗಿದ್ದಾರೆ, ತಕ್ಷಣ ಹೊರಟು ಬರೋದು ವಾಸಿ, ಅಂತನ್ನೋ ಅರ್ಥದಲ್ಲಿ.

ಅಯ್ಯೋ ಗೋವಿಂದಾ, ಅಂದುಕೊಂಡು ಮನೇಗೆ ಬಂದು ನೋಡಿದ್ರೆ ಹಾಲ್‌ನಲ್ಲಿದ್ದ ಟಿ.ವಿ. ಮತ್ತೆ ಸ್ಟೀರಿಯೋ ಹೊರಟುಹೋಗಿದೆ. ಪುಣ್ಯಕ್ಕೆ ರೂಮುಗಳ ಬೀಗ ಒಡದಿರಲಿಲ್ಲ - ಹಾಗಾಗಿ ಹೊಸದಾಗಿ ಮಾಡಿಸಿದ್ದ ಒಡವೆ ಏನೂ ಆಗಿರಲಿಲ್ಲ. ಪೋಲೀಸ್‌ನವರಿಗೇನೋ ಹೇಳಿದ್ದಾಯ್ತು, ಪ್ರಯೋಜನ ಆಗ್ಲಿಲ್ಲ ಅಷ್ಟೆ.

ಇನ್ನೊಂದು ಹದಿನೈದು ದಿನ ಆಗಿರಬಹುದು. ಮಧ್ಯಾನ್ಹ ಜಾನಕಮ್ಮ ಮನೇನಲ್ಲಿ ಒಬ್ಬರೇ ಇದ್ದಾಗ ವ್ಯಾಕ್ಯೂಂ ಕ್ಲೀನರ್ ಮಾರೋನೂ ಅಂತ ಒಬ್ಬ ಬಂದ. ಹ್ಯಾಗಿರತ್ತೋ ನೋಡೋಣ ಅಂತ ಬಾಗಿಲು ತೆಗೆದರೆ ಬಂದಿದ್ದೋನು ಚಾಕು ತೋರಿಸಿ ಅವರ ಮೈಮೇಲಿದ್ದ ಒಡವೇನೆಲ್ಲ ಕ್ಲೀನ್ ಮಾಡಿಕೊಂಡು ಹೋದ.

ಹೀಗೇ ಹದಿನೈದು ದಿನಕ್ಕೆ ಒಂದು ಸಲ ಅನ್ನೋ ಥರದಲ್ಲಿ ಏನಾದ್ರೂ ಒಂದು ಕಳುವಾಗೋಕ್ಕೆ ಶುರೂ ಆಯಿತು. ಒಂದು ತಮಾಷೆ ಅಂದರೆ ಹೋಗಿದ್ದೆಲ್ಲಾ ಹೊಸಾ ದೇವರ ಅನುಗ್ರಹದಿಂದ ಬಂದ ಸಾಮಾನುಗಳೇ... ಮನೇನಲ್ಲಿ ಕಾಲದಿಂದ ಇದ್ದವು ಯಾವುದಕ್ಕೂ ಏನೂ ಆಗಿರಲಿಲ್ಲ.

ಅಂದ್ರೆ ಏನಾಯಿತು? ಈ ಹೊಸಾ ದೇವರ ಪೂಜೇನಲ್ಲಿ ಏನೋ ಲೋಪ ಆಗಿರಬೇಕು - ಹಾಗಂದುಕೊಂಡು ರಂಗಧಾಮಯ್ಯ ಒದ್ದೆ ಉಟ್ಕೊಂಡು, ನೀನು ಪ್ರತ್ಯಕ್ಷ ಆಗೋ ತನಕ ಇಲ್ಲಿಂದ್ ಏಳೊಲ್ಲ, ಒಂದು ಅಗಳು ಅನ್ನ ಮುಟ್ಟೋಲ್ಲ, ಅಂತ ದೇವರ ಎದುರಿಗೆ ಕೂತುಬಿಟ್ಟ.

ಅವನದ್ದು ಒಳ್ಳೇ ಸೊಂಪಾಗಿ ಬೆಳೆದ ದೇಹ, ಒಂದು ವಾರ ಉಪವಾಸ ಇದ್ರೂನೂವೆ ತಡಕೋತಿತ್ತು. ಆದ್ರೆ ದೇವರಿಗೇನೇ ಹೆದರಿಕೆ, ಎಲ್ಲಿ ಸತ್ತುಹೋಗಿಬಿಡತಾನೋ ಅಂತ. ಹಾಗಾಗಿ ಒಂದು ಎರಡು ಘಂಟೇ ಒಳಗೆಲ್ಲ ಅವನೆದುರಿಗೆ ಕಾಣಿಸಿಕೊಂಡ, ಏನು ಸಮಾಚಾರ ವಿಚಾರಿಸೋಕ್ಕೆ ಅಂತ.

''ಅದೆಂಥ ದೇವರು ನೀನು? ಒಂದು ಕೈನಲ್ಲಿ ನಾವು ಕೇಳಿದ್ದನ್ನೆಲ್ಲಾ ಕೊಡತಾ ಬಂದಿ, ಆದ್ರೆ ಒಂದು ಆರು ತಿಂಗಳೂ ಅನ್ನೋ ಹೊತ್ತಿಗೆ ಇನ್ನೊಂದು ಕೈನಲ್ಲಿ

ಅದನ್ನೆಲ್ಲ ಕಿತ್ಕೊಂಡು ಹೋಗತಾ ಇದ್ದೀಯ... ಅದಕ್ಕೇ ಅಂತ ಕಾಣುತ್ತೆ ನಿಮಗೆಲ್ಲ ಗಿರಾಕಿ ಬಿದ್ದು ಹೋಗಿರೋದು... ಯಾಕೆ ಗೂಬೆ ಥರ ನಿಂತ್ಕೊಂಡಿದ್ದೀಯ? ಏನಾದ್ರೂ ಮಾತಾಡು.''

''ನೀನು ನಂಬಿದ್ರೆ ನಂಬು, ಬಿಟ್ರೆ ಬಿಡು - ಸ್ವಲ್ಪ ಎಡವಟ್ಟಿನ್ ಕೆಲಸ ಆಗಿಹೋಗಿದೆ...''

''ಎಂಥಾದ್ದು?''

''ಪರಮಾತ್ಮನಿಗೆ ಯಾರೋ complaint ಕೊಟ್ಟು ಬಿಟ್ಟಿದ್ದಾರೆ - ನಾವು ಜೂನಿಯರ್ ದೇವ್ರುಗಳು ಲೆಕ್ಕಾ ಜಮಾ ಇಲ್ಲದ ಹಾಗೆ ಜನಗಳಿಗೆ ವರಗಳನ್ನ ಕೊಡ್ತಾ ಇದ್ದೀವಂತೆ, ಅವರುಗಳ source of pooja offerings ಏನೂ ಅಂತ ನೋಡದೀರ. ಹಾಗಾಗಿ ಕೈನಲ್ಲಿ ಕಾಸಿಲ್ಲದಿರೋ ನಿಜವಾದ ಭಕ್ತರುಗಳಿಗೆ benefits ಅನ್ನೋದು ಏನೂ ಸಿಗದೀರ ಅವೆಲ್ಲ ಈಗ ಬರೀ ಮೋಸಗಾರರು, ಕಳ್ಳ ಖದೀಮರಿಗೆ ಹೋಗತಾ ಇದ್ಯಂತೆ... ಅದಕ್ಕೇ ಪರಮಾತ್ಮ ಅದನ್ನ ವಿಚಾರಣೇ ಮಾಡಿ, ನಾವು ಸರಿಯಾಗಿ ನೋಡದೀರ ಅಂಥಾ ಕಳ್ಳ ಖದೀಮರಿಗೆ ಏನಾದ್ರೂ ವರಗಳನ್ನ ಕೊಟ್ಟಿದ್ದೀವಿ ಅಂತ ಇದ್ರೆ ಅದೆಲ್ಲಾ ಅವರುಗಳಿಗೆ ಯಾವ ಯಾವ ಆಧಾರದ ಮೇಲೆ ಕೊಟ್ಟಿವ್ರೋ ಅದೇ ರೀತೀನಲ್ಲಿ ಅವರುಗಳ ಕೈ ಬಿಟ್ಟು ಹೋಗೋ ಥರ ಮಾಡೋದಕ್ಕೆ ಒಂದು ಸಮಿತೀನ ಮಾಡಿದ್ದಾನೆ...''

''ಅದ್ರೆ?...''

''For example... ಮೋಸ ಮಾಡಿ ಬಂದ ವಸ್ತುಗಳನ್ನ ಸಮರ್ಪಣೆ ಮಾಡಿ ವರ ತಗೊಂಡಿದ್ರೆ, ಅದು ಮೋಸದಿಂದಲೇ ಹೊರಟೋಗತ್ತೆ... ಕದ್ದ ಮಾಲು ಅರ್ಪಣೆ ಮಾಡಿ ತಗೊಂಡಿದ್ರೆ...''

''ಅಂದ್ರೆ ನೀನು ಹೇಳೋದು ನಾನು ಮೋಸದ ಸಾಮಾನು, ಕದ್ದ ಸಾಮಾನು ಬಳಸಿ ನಿನ್ನ ಪೂಜೆ ಮಾಡಿದೇ ಅಂತಲೋ?''

''ಛೆ, ನಾನು ಹಾಗೆ ಹೇಳತಿಲ್ಲ... ಆದರೆ ನಿನಗೇ ಗೊತ್ತಿಲ್ಲದ ಹಾಗೆ ನಿಮ್ಮನೇನಲ್ಲಿ ಯಾರಾದ್ರೂ...?''

''ಹಾಗೆ ಆಗೋಕ್ಕೆ ಸಾಧ್ಯಾನೇ ಇಲ್ಲ... ಪೂಜೇಗೆ ಬೇಕಾದ ಅರಿಶಿನ, ಕುಂಕುಮ, ಗಂಧದ್‌ಕಡ್ಡಿ, ಹೂಬತ್ತಿ ಮೊದಲುಗೊಂಡು ಎಲ್ಲಾವನ್ನೂ ನಾನೇ ಸ್ವತಃ ಕಾಸುಕೊಟ್ಟು ಕೊಂಡುಕೊಂಡು ಬರತಾ ಇದ್ದೀನಿ...''

''ಹಾಗಾದ್ರೆ ಇನ್ನು ಎಲ್ಲಿ ಎಡವಟ್ಟಾಗಿರಬಹುದೂ?... ಇನ್ನು ಉಳಿದಿರೋದು ಒಂದೇ ಸಾಮಗ್ರಿ, ನೀನು ಪೂಜೆಗೆ ಉಪಯೋಗಿನತಾ ಇರೋ ಹೂವು... ಅದಕ್ಕೆ ಹ್ಯಾಗೆ ಮಾಡತಾ ಇದ್ದೀಯ?''

''ಅದೂ, ಅದೂ...''

''ಥೂ, ಹೇಳು, ಯಾಕೆ ತಡವರಿಸ್ತಾ ಇದ್ದೀಯ?''

''ಮಾರ್ಕೆಟ್‌ಗೆ ಹೋಗೋ ದಾರೀನಲ್ಲಿ ಹನುಮಂತಾಚಾರ್‍ರದು, ಸಿಂಗ್ರಯ್ಯಂಗಾರ್‍ರದು, ನಂಜುಂಡ ಭಟ್ಟರ್‍ದೂ, ರಜಾಕ್ ಸಾಬರ್‍ದೂ ಅಂತ ಒಂದು ಹನ್ನೆರಡು ಮನೆಗಳಿವೆ. ಎಲ್ಲಾ ಮನೆಗಳಲ್ಲೂ ಸೊಗಸಾದ ಹೂವಿನ ತೋಟ... ಸುರಿದು ಹೋಗತಾ ಇರತ್ವೆ ಹೂವೂ ಅನ್ನೋದು... ಒಂದೊಂದು ಮನೇಯಿಂದಲೂ ಒಂದು ಇಷ್ಟಿಷ್ಟೂ ಅಂತ ಕಿತ್ಕೊಂಡು ಬರತಾ ಇದ್ದೀನಿ... ದೇವ್ರ ಕೆಲಸಾ ತಾನೆ? ಜತೆಗೆ ಮಾರ್ಕೆಟ್‌ಗೆ ಹೋಗೋ ತ್ರಾಸ ಕೂಡ ತಪ್ಪಿದ ಹಾಗಾಯ್ತಲ್ಲ...?''

''ಆಹ್ಹಾ, ಈಗ ತಿಳೀತು ನೋಡು, ಅಳಿಯನ ಕುರುಡು... ಅದಕ್ಕೇ ನಿಮ್ಮನೇನಲ್ಲಿ ಕಳ್ಳತನಗಳು ಆಗತಾ ಇರೋದು.''

''ಇನ್ನೊಬ್ಬರ ಮನೇನಲ್ಲಿ ಬಿಟ್ಟಿರೋ ಹೂವನ್ನ, ಅದೂ ದೇವರ ಪೂಜೇಗೆ ಅಂತ, ಕಿತ್ಕೊಂಡ್ ಬಂದ್ರೆ ಅದು ಕಳ್ಳತನಾ ಅಂತ ಆಗತ್ತೋ, ನಿಮ್ಮ ಆ ಸುಡುಗಾಡು ಸಮಿತೀ ಲೆಕ್ಕದಲ್ಲಿ?... ನಾಳೆ ಬೆಳಗ್ಗೆ ಆ ನಿನ್ನ ಪರಮಾತ್ಮನ್ನೂ ಕರಕೊಂಡು ನನ್ನ ಜತೇನಲ್ಲಿ ಬಾ, ಎಷ್ಟು ಜನ ಬುಟ್ಟಿ ಹಿಡಕೊಂಡು, ಸ್ಪೆಷಲ್ಲಾಗಿ ದೋಟಿಗಳನ್ನ ಮಾಡಿಸ್ಕೊಂಡು ಇನ್ನೊಬ್ಬರ ಮನೇ ತೋಟಗಳಿಂದ ಎಷ್ಟು ಎಷ್ಟು ಹೂವ ಕಿತ್ಕೊಂಡು ಹೋಗತಾ ಇರ್ತಾರೆ ಅನ್ನೋದು ಕಣ್ಣಾರ ನೋಡೋರಂತೆ... ಅವರನ್ನೆಲ್ಲ ಯಾಕೆ ಮುಟ್ತಾ ಇಲ್ಲವಂತೆ, ನಿಮ್ಮ ಆ ಪರಮಾತ್ಮಾ...?''

''ಅವರಿಗೆಲ್ಲಾ ಏನು ಕೊಟ್ಟನೋ ಏನು ಕಿತ್ಕೋತಾ ಇದಾನೋ ಅದು ಆ ಪರಮಾತ್ಮನಿಗೇ ಗೊತ್ತು... ಅದನ್ನ ಕೇಳೋಕ್ಕೆ ಸಮಿತೀಗೆ jurisdiction ಇಲ್ಲ... ಅದೇನೋ ಅತ್ತೆ ಒಡೆದ ಪಾತ್ರೇಗೆ ಬೆಲೆ ಇಲ್ಲ ಅಂತಾರಲ್ಲ, ಆ ಲೆಕ್ಕದಲ್ಲಿ... ನಾವು ಪ್ಯಾದೆಗಳು ವರ ಕೊಟ್ಟದ್ದನ್ನ ಮಾತ್ರ review ಮಾಡಿ suitable recovery action ತಗೊಳ್ಳಿ ಅಂತನ್ನೋದು ಮಾತ್ರ ಅದರ terms of reference... ಅದರ ಲೆಕ್ಕದಲ್ಲಿ ನಾನು ಕದ್ದ ಮಾಲನ್ನ ನಿನ್ನಿಂದ ಒಪ್ಪಿಸ್ಕೊಂಡು ಅದರ ಬದಲಿಗೆ ನಿನಗೆ ಕೇಳಿದ್ದನ್ನೆಲ್ಲಾ ಕೊಟ್ಟಿದ್ದೀನಿ ಅಂತ ಇರಬೇಕು, ಅದಕ್ಕೇ ನಿಮ್ಮನೇನಲ್ಲಿ ಹೀಗಾಗ್ತಾ ಇರೋದು... ನನ್ನ ಅನುಗ್ರಹದಿಂದ ಬಂದದ್ದು ಏನಾದ್ರೂ ಇನ್ನೂ ಉಳಿದಿದ್ಯೋ ಇಲ್ಲಾ ಎಲ್ಲಾ ಹೊರಟೋಗಿದ್ಯೋ, ಕಳ್ಳತನಾ ಅಂತ ಆಗಿ?''

''ಇಲ್ಲ, ಇನ್ನೂ ಬೇಕಾದಷ್ಟು ಇದೆ ಮನೇ ತುಂಬ...''

''ಹಾಗಾದ್ರೆ ಇನ್ನೊಂದಿಷ್ಟು ಸಲ ಬಂದು ಹೋಗತಾರೆ ಕಳ್ಳರು ನಿಮ್ಮನೇಗೆ... ಪೋಲೀಸ್‌ನೋರಿಗೆ ಹೇಳಿರತೀನಿ ಅಂದ್ಯಾ? ಉಹುಂ, no use.''

ಕ್ಲೈಮ್ಯಾಕ್ಸ್ - ಕ್ಲೈಮಾಕ್ಸ್

– ಕೃಷ್ಣ ಸುಬ್ಬರಾವ್

ಯಶಸ್ವಿಯ ಹಿಂದೆ ಬಹಳ ಜನ ಇದ್ದರು ಎಂದು ಗೊತ್ತಾಗುವುದು ಅವರಾಡುವ ಜಗಳದಿಂದ, ಪರಸ್ಪರ ದೋಷಾರೋಪದಿಂದ. ಬಹುಶಃ ಈ ಕಾರಣದಿಂದಲೇ ಯಶಸ್ವಿ ಜೋಡಿಗಳು ಬಹಳ ಬೇಗ ಬೇರೆ ಬೇರೆ ಆಗ್ತಾರೆ. ನಾನು ಗಂಡ - ಹೆಂಡ್ತಿ ವಿಚಾರ ಖಂಡಿತ ಹೇಳ್ತಿಲ್ಲ ಹಾಸ್ಯಲೇಖಕರಿಗೆ ಗಂಡ-ಹೆಂಡ್ತಿ ಬಿಟ್ರೆ ಇನ್ಯಾರೂ ಸಿಗೊಲ್ಲಾ ಅಂತ ಪರ್‌ಮನೆಂಟ್ ಆರೋಪ ಇರೋದರಿಂದ ಅವರ ತಂಟೆಗೆ ನಾನು ಹೋಗ್ತಿಲ್ಲ. ಜೋಡಿ ಅಂದ ತಕ್ಷಣ ಅದು ಗಂಡ ಹೆಂಡ್ತಿ ಅಂತ ಊಹಿಸಬಾರ್ದು. ಪ್ರಪಂಚದಲ್ಲಿ ಜಗಳವಾಡುವ, ವಿರುದ್ಧ ದಿಕ್ಕಿನಲ್ಲಿ ಎಳೆದಾಡುವ ಜೋಡಿಗಳು ಬೇಕಾದಷ್ಟಿವೆ. ಉದಾಹರಣೆಗೆ ನಿರ್ಮಾಪಕ - ನಿರ್ದೇಶಕ, ನಾಯಕ - ನಾಯಕಿ ಪ್ರಕಾಶಕ - ಲೇಖಕ... ಹೀಗೆ ಅನೇಕ ಜೋಡಿಗಳು ಇರುತ್ತವೆ. 'ಜೋಡಿ' ಅನ್ನೋದು ಲಿಂಗಾತೀತವಾದ್ದರಿಂದ 'ಇರುತ್ತವೆ' ಎಂಬ ಪದ ಪ್ರಯೋಗ. ಮೊನ್ನೆ ಅತ್ಯಂತ ಯಶಸ್ವಿ ನಿರ್ಮಾಪಕ ತನ್ನ ''ಯುರೇಕ ಯುರೇಕ'' ಎಂಬ ಚಿತ್ರದ ಯಶಸ್ಸಿಗೆ ತಾನೇ ಕಾರಣ. ಆ ಚಿತ್ರದ ಯಶಸ್ಸಿಗೆ ಚಿತ್ರದ ಕ್ಲೈಮಾಕ್ಸ್ ಕಾರಣ. ಆ ಕ್ಲೈಮ್ಯಾಕ್ಸ್‌ಗೆ ತಾನೇ ಕಾರಣ ಅಂತ ವಿಸ್ಕಿ ಮೇಲೆ ಆಣೆ ಹಾಕಿ (ದಯವಿಟ್ಟು ವಿಸ್ಕಿ ಬಾಟಲಿನ ಮೇಲೆ ನಾಣ್ಯ ಹಾಕಿ ಎಂದು ಭಾವಿಸಬಾರದು) ಹೇಳಿದ. ನಿರ್ದೇಶಕ ಮತ್ತೊಂದು ಬಾರ್‌ನಲ್ಲಿ ಸಭೆ ಕರೆದು ಚಿತ್ರದಲ್ಲಿ ಹಣ ಸರಿಯೋದು ಬಿಟ್ಟರೆ, ಪಾರ್ಟಿಗಳಲ್ಲಿ ಹೆಂಡ ಸುರಿಯೋದು ಬಿಟ್ಟರೆ, ನಿರ್ಮಾಪಕನ ಪಾತ್ರ ಕೇವಲ ವಿಸ್ಕಿಗೆ ಸೋಡ ಬೆರಸುವಷ್ಟೆ ಕೆಲ್ಸ. ನೀವೆ ಹೇಳಿ ಸ್ವಾಮಿ, ನಿಮಗೆ ಕಿಕ್ ಕೊಡೋದು ವಿಸ್ಕಿಯೋ ಅಥವಾ ಅದಕ್ಕೆ ಬೆರಸುವ ಸೋಡವೋ? ಕ್ಲೈಮಾಕ್ಸ್‌ನಲ್ಲಿ ಹೀರೋಗೆ ವಿಲನ್ ಬಲಗಡೆಯಿಂದ ಬಂದು ಒದೆಯಬೇಕೆಂದು ಹೇಳಿದಾಗ ನಿರ್ಮಾಪಕ ಎಡಗಡೆಯಿಂದ ಬಂದು ಒದಿಬೇಕು ಎಂದು ಸಲಹೆ ಮಾಡಿದರು. ಅಷ್ಟು ಸಲಹೆ ಮಾಡಿದರೆ ಅದು ಅವರು ಕಲ್ಪಿಸಿದ ಕ್ಲೈಮ್ಯಾಕ್ಸ್ ಹೇಗೆ ಆಗುತ್ತೆ? ನ್ಯಾಯವಾಗಿ ನೋಡಿದರೆ ಯಶಸ್ಸು ಆ ಸ್ಟಂಟ್ ಮಾಸ್ಟರ್‌ಗೆ ಸಲ್ಲಬೇಕು. ಹಂಗೆ ನೋಡಿದರೆ ಅಷ್ಟೆಲ್ಲಾ ಹಣ ಲೂಟಿಮಾಡಿ,

ನಾಯಕನ ಚೂಪ್ ಮಾಡಿದ... ಅವರಿಗೆ ಏಟು ಬಿದ್ದು ಹಲ್ಲುಗಳೆಲ್ಲಾ ಉದುರಿ ಅದನ್ನು ಕಟ್ಟಿಸಿಕೊಳ್ಳಲು ಹಣ ಕೊಡುವ ಸೌಜನ್ಯ ತೋರಿಸಿಲ್ಲ. ಆ ಸ್ಟಂಟ್ ಮ್ಯಾನ್ ಈಗ ತನಗಾದ ಮುಖಭಂಗಕ್ಕೆ ನ್ಯಾಯಾಲಯ ಹತ್ತಿದ್ದಾನೆ. ಈ ರೀತಿ ಆರೋಪ - ಪ್ರತ್ಯಾರೋಪಗಳ ದೃಶ್ಯಗಳನ್ನು Live telecast ಮಾಡಿದ್ದಾರೆ ಅದು ಒಳ್ಳೆ ಸೀರಿಯಲ್‌ಗೆ ನಾಂದಿಯಾಗುತ್ತಿತ್ತು ಎಂದು ಒಂದಿಬ್ಬರು ಯೋಚಿಸಿದರೆ, ಒಬ್ಬ ದಿಢೀರ್ ನಿರ್ಮಾಪಕ ಹುಟ್ಟಿಕೊಂಡ. ಆತ ಅತಿ ಬುದ್ಧಿವಂತ ಅದರ ಜೊತೆಗೆ ಹೆಚ್ಚಾಗಿ ಹೆಂಡ ಹೀರಿದ್ದ. ಹೀಗಾಗಿ ಒಂದು ದಿಢೀರ್ ಯೋಜನೆ ನಿರ್ದೇಶಕನ ಕೈಗಿತ್ತ. ಕ್ಲೈಮ್ಯಾಕ್ಸ್‌ಗಳನ್ನೆಲ್ಲಾ ಒಂದುಗೂಡಿಸಿ ಕ್ಲೈಮಾಕ್ಸ್ - ಕ್ಲೈಮಾಕ್ಸ್ ಎಂಬ ಚಿತ್ರದ ಬಗ್ಗೆ ಒದರುತ್ತಿದ್ದ. ಬೂಟ್ಸ್ ಇಂಡಿಯಾ ಬ್ಯಾನರ್‌ನಲ್ಲಿ ಚಿತ್ರ ತಯಾರಾಗುವ ಮಾತು ಬಂತು.

ಸೋಬರ್ಸ್‌ಗಳು (ಸೋಬರ್ ಆಗಿರುವ ವ್ಯಕ್ತಿಗಳು) ಅಪರೂಪವಾಗಿರುವ ಸ್ಥಳವಾದ್ದರಿಂದ ಒಮ್ಮೆಲೆ ಎಲ್ಲಾ ಸಲಹೆಗಳಿಗೂ ಒಮ್ಮತದಿಂದ ಒಪ್ಪಿಗೆ ಬಂತು. ಆದರೆ ಕೆಂಡವಾಗಿದ್ದ ನಿರ್ದೇಶಕ ಒಂದು ಶರತ್ತು ಹಾಕಿದ. ಚಿತ್ರದ ಯಾವ ಹಂತದಲ್ಲಾದರೂ ತಲೆಹಾಕಿದರೂ ಪರವಾಗಿಲ್ಲ ಕ್ಲೈಮಾಕ್ಸ್‌ನಲ್ಲಿ ಮಾತ್ರ ನಿರ್ಮಾಪಕ ತಲೆ ಹಾಕಬಾರದು. ಶರತ್ತು ಹಾಕಿದ ಗಳಿಗೆಯಲ್ಲೆ ಕ್ಲೈಮಾಕ್ಸ್ ಚಿತ್ರದ ಮುಹೂರ್ತ ಎಂಬಂತೆ ಅಲ್ಲೇ ಶುರುವಾಯಿತು ಧಾಳಿ ಮೊದಲು ಮಾತಿನದು ನಂತರ ಮಧ್ಯದ ಅಮಲಿನದು ಬಾರ್ ಮಾಲಿಕ ಹುಷಾರಾದ. ಅವನೇ ಪ್ಯಾಕ್ - ಅಪ್ ಅಂದ. ಅಲ್ಲಿ ಒಂದೆರಡು ಪತ್ರಿಕಾ ಪ್ರತಿನಿಧಿಗಳು ಉಪಸ್ಥಿತರಿದ್ದರಿಂದ ಬರಲಿರುವ ಸಿನಿಮಾದ ಬಗ್ಗೆ ನಡೆದ ಚರ್ಚೆ ಪೂರ್ವಭಾವಿ ಪಬ್ಲಿಸಿಟಿಗೆ ಬೇಕಾದಷ್ಟು ಸಿಕ್ಕಿತು.

ಜೈ ಚಿತ್ರ ನಿರ್ಮಾಣ!

ಬಿಸಲಿನ ತಾಪವನ್ನು ಹೊರದೂಡಲೂ ಪಬ್ ಒಳಗೆ ನುಗ್ಗಿ ಬೀರ್ ಹಾಕಲು ಹೋಗಿದ್ದ ನಾನು ನನ್ನ ಗೆಳೆಯ ಮೂಕ ಪ್ರೇಕ್ಷಕರಾಗಿ ಕುಳಿತಿದ್ದೆವು. ಪ್ರೇಕಕ ಯಾವಾಗಲೂ ಮೂಕ ತಾನೆ! 'ಮೂಕ ಪ್ರೇಕ್ಷಕ' ಎನ್ನುವ ಪದ ಪ್ರಯೋಗ ಎಷ್ಟು ಸರಿ. ಜಿ.ವಿ. ಯವರನ್ನು ಕೇಳೋಣ ಅಂದ ನನ್ನ ಗೆಳೆಯ. ಸರಿ ಏನಾದರೂ ಮಾಡು. ಆದರೆ ಈ ಸ್ಥಿತಿಯಲ್ಲಿ ಅವರಿಗೆ ತೊಂದರೆ ಕೊಡಬೇಡ ಅವರ ಮನೇಲಿ ಎಂದು ಮಂಗಳ ಹಾಡಿದೆ.

ಮಣ್ಣು

– ಶ್ರೀನಿವಾಸ ವೈದ್ಯ (ಶೀನೂ)

ಮಣ್ಣು ಮಣ್ಣು ಕನ್ನಡ ಮಣ್ಣು
ಕಾವೇರಿ ತೀರದ ಪುಣ್ಯದ ಮಣ್ಣು!

ಮಣ್ಣು ಮಣ್ಣು ಕನ್ನಡ ಮಣ್ಣು
ಶಿರಿಗಂಧವ ಬೆಳೆಯುವ ಹೊನ್ನಿನ ಮಣ್ಣು!

ಮಣ್ಣು ಮಣ್ಣು ಕನ್ನಡ ಮಣ್ಣು
ತುಂಗಾತೀರದ ರಸ ಮಣ್ಣು!

ಮಣ್ಣು ಮಣ್ಣು ಕನ್ನಡ ಮಣ್ಣು
ಕೋಲಾರದ ಬಂಗಾರದ ಮಣ್ಣು!

ಮಣ್ಣು ಮಣ್ಣು ಕನ್ನಡ ಮಣ್ಣು
ಕೃಷ್ಣಾತೀರದ ಕೆಚ್ಚಿನ ಮಣ್ಣು!

ಮಣ್ಣು ಮಣ್ಣು ಕನ್ನಡ ಮಣ್ಣು
ಮಣ್ಣಿನ ಮಗ ತಾ ಮುಕ್ಕಿದ ಮಣ್ಣು!

ಚೇರ್ಮನ್ನರ ಭೇಟಿ

– ರಾಮಿ

ಚೇರ್ಮನ್ನರು ತಮ್ಮ ಬೀದಿಗೆ ಭೇಟಿ ಕೊಡಲಿದ್ದಾರೆಂದು ಚಿಕ್ಕಪ್ಪನಿಗೆ ಸಂಭ್ರಮವೇ ಸಂಭ್ರಮ.

ಮನೆ ಅಕ್ಕಪಕ್ಕದ ಕಸದ ಗುಪ್ಪೆಗಳೆಲ್ಲ ಅಂತರ್ಧಾನ. ಮನೆಯೊಳಗಿನ ಜೇಡರ ಬಲೆಗಳೆಲ್ಲ ಮಂಗಮಾಯ. ಗೋಡೆಗಳಿಗೆಲ್ಲ ಸುಣ್ಣಬಣ್ಣ. ಕಿಟಕಿ ಬಾಗಿಲುಗಳಿಗೆ ರಂಗೇ ರಂಗು!

ಚೇರ್ಮನ್ನರು ನಗರ ಸಂಚಾರದ ಸಂದರ್ಭದಲ್ಲಿ ಅಪ್ಪಾಜಪ್ಪನ ಬಂಗ್ಲೆ ಇರುವ ಮೇಲ್ ಬೀದಿಗೆ ಭೇಟಿಕೊಡಲಿದ್ದಾರೆಂದು ತಿಳಿದ ಕೂಡಲೆ ಚಿಕ್ಕಪ್ಪ ಚೇರ್ಮನ್ನರನ್ನು ಕಂಡು ನಾವಿರುವ ಕೆಳಬೀದಿಗೂ ಭೇಟಿ ನೀಡಲೇಬೇಕೆಂದು ವರಾತ ಹಿಡಿದರು. ಚೇರ್ಮನ್ನರನ್ನು ಕಛೇರಿಯಲ್ಲಿ ಕಂಡು ಮಾತಾಡಿದ್ದು ಮಾತ್ರವಲ್ಲದೆ ಬಿಡಾರಕ್ಕೂ ನುಗ್ಗಿ ಸತಾಯಿಸಿ 'ನೋಡೋಣ' ಎಂಬ ಘನ ಆಶ್ವಾಸನೆ ಪಡೆದರು.

ಅಪ್ಪಾಜಪ್ಪ ಇರುವ ಮೇಲ್ ಬೀದಿಗಂತೂ ಚೇರ್ಮನ್ನರ ಭೇಟಿ ಗ್ಯಾರಂಟಿ ಅಂತ ಜನ ಆಡಿಕೊಳ್ಳತೊಡಗಿದ್ದರು. ಅಪ್ಪಾಜಪ್ಪನ ಮನೆ ಮುಂದೆ ಚೇರ್ಮನ್ನರಿಗಾಗಿ ರಂಗು ರಂಗಿನ ಚಪ್ಪರ ನಿರ್ಮಾಣಗೊಂಡಮೇಲಂತೂ ಚಿಕ್ಕಪ್ಪನಿಗೆ ನಿದ್ರೆಯಿಲ್ಲ. ಆದರೂ ಚಿಕ್ಕಪ್ಪ ಆಶಾವಾದಿ ಚೇರ್ಮನ್ನರ 'ನೋಡೋಣ' ಮಂತ್ರ ಜಪಿಸುತ್ತಾ ದಿನ ಲೆಕ್ಕ ಹಾಕತೊಡಗಿದ್ದರು. ಕೆಳಬೀದಿಯವರ ತಾಪತ್ರಯಗಳನ್ನೆಲ್ಲ ಪಟ್ಟಿ ಮಾಡಿದರು. ಅಗತ್ಯದ ಅಭಿವೃದ್ಧಿ ಕಾರ್ಯಗಳ ಪಟ್ಟಿಯಂತೂ ಆಂಜನೇಯನ ಲಾಂಗೂಲದಂತೆ ಬೆಳೆಯಿತು. ಕೆಳಬೀದಿಯವರು ಎಲ್ಲ ಸಹಕಾರಕ್ಕೆ ಸಿದ್ಧ ಎಂದು ಬ್ಯಾನರು ಬರೆಸುವುದೊಂದು ಬಾಕಿ! ಆದರೆ ಈ ವೇಳೆಗೆ ಕೆಟ್ಟ ಸುದ್ದಿ ಬರಸಿಡಿಲಿನಂತೆ ಬಂದೆರಗಿತು. ಚೇರ್ಮನ್ನರ ನಗರ ಸಂಚಾರ ಕಾರ್ಯಕ್ರಮ ತೀರ ಒತ್ತಡದ್ದಾಗಿದ್ದರಿಂದ ಅವರಿಗೆ ಮೇಲ್‌ಬೀದಿ ಭೇಟಿ ಮಾತ್ರ ಸಾಧ್ಯ ಎಂದು ತಿಳಿದುಬಂತು. ಅಪ್ಪಾಜಪ್ಪ ಗಪಗಹಿಸಿರಬೇಕೆಂದು ಚಿಕ್ಕಪ್ಪ ತನ್ನಷ್ಟಕ್ಕೇ ಭಾವಿಸಿಕೊಂಡರು.


"ಚೇರ್ಮನ್ನರು ಬಾರದಿದ್ದರೆ ಆಕಾಶ ಕಳಚಿಬೀಳುವುದಿಲ್ಲ. ಅವರು ಮಾಜಿ ಚೇರ್ಮನ್ ಆದಮೇಲಾದರೂ ಬಂದೆ ಬರುತ್ತಾರೆ" ಎಂಬ ಚಿಕ್ಕಪ್ಪನ ಉದ್ಗಾರ ಅಪ್ಪಾಜಪ್ಪನ ಕಿವಿತನಕ ಹೋಗಿರಬಹುದು, ತಂತಿ ಕಂಬಗಳ ಮೂಲಕ ಚೇರ್ಮನ್ನರಿಗೂ ತಲಪಿರಬಹುದು. ಆಂತ ಚಿಕ್ಕಪ್ಪನ ಎಣಿಕೆ.

ಇರಲಿ ಇಷ್ಟೆಲ್ಲ ನಡೆದಿದ್ದು 60 ವರ್ಷಗಳ ಹಿಂದೆ ಕ್ಲಿಂಟನ್ ಭೇಟಿಗಿಂತ ಎಷ್ಟೋ ಮೊದಲು!

ಮುದ್ರಾರಾಕ್ಷಸನ ಹಾವಳಿ

ದೇವರ ಖರೀದಿ !!

DECCAN HERALD, SUNDAY, MAY 10, 1998



ಮದ್ಯ ಸರೋವರ !!

ಅಷ್ಟೈಶ್ವರ್ಯದ ಅಷ್ಟಮಠ।

[illegible]

"ರೇಷನ್ ಕಾರ್ಡ್‌ಗೆ ಎರಡು ಫ್ಲಾಪಿ ಅಂತ ಡಿಸ್ಟ್ರಿಬ್ಯೂಟ್ ಮಾಡ್ಬಿಡಿ"

ಪುಸ್ತಕ ಪರಿಚಯ

"ಗುಡ್‌ಬೈ ಬಿಜಾಪುರ" (ಹನ್ನೆರ್ಡು - ಇನ್ನೆರ್ಡು ನಗೆಬರಹಗಳು)

ಲೇ : ಮಲ್ಲಿಕಾರ್ಜುನ ಹುಲಗಬಾಳಿ

ಪ್ರಕಾಶನ : ನಂದ ಪ್ರಕಾಶನ, ಬನಹಟ್ಟಿ - 587 311

ಪುಟ : xii85, ಬೆಲೆ: 40-00 ರೂಪಾಯಿಗಳು

ನಾಡಿನ ಪತ್ರಿಕೆಗಳಲ್ಲಿ ಈಗಾಗಲೇ ತಮ್ಮ ವಿಭಿನ್ನ ಬರಹಗಳ ಮೂಲಕ ಚಿರಪರಿಚಿತರಾದ ಪ್ರೊ॥ ಮಲ್ಲಿಕಾರ್ಜುನ ಹುಲಗಬಾಳಿಯವರ 'ಗುಡ್‌ಬೈ ಬಿಜಾಪುರ' ಹಾಸ್ಯ ಪ್ರಬಂಧಗಳ ಮೂರನೆಯ ಸಂಕಲನ. ಈ ಮೊದಲು 'ಟೊಂಯ್ ಟೊಂಯ್ ಮಾತು' ಹಾಗೂ 'ಉದರೋಪನಿಷತ್' ಕೃತಿಗಳನ್ನು ನೀಡುವ ಮೂಲಕ ಕನ್ನಡದ ಹಾಸ್ಯ ಬರಹಗಾರರಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು. ಐದು ನದಿಗಳ ಜಿಲ್ಲೆ ಬಿಜಾಪುರ 'ಕರ್ನಾಟಕದ ಪಂಜಾಬ' ಎಂದು ಕರೆಸಿಕೊಂಡದ್ದಷ್ಟೇ ಅಲ್ಲ ಭಾಷೆ, ಸಾಹಿತ್ಯ, ಸಂಸ್ಕೃತಿ, ಜನಜೀವನ ಏನನ್ನೇ ತೆಗೆದುಕೊಂಡರು ನಾಡಿಗೆ ಅದರದೇ ಆದ ಸಮೃದ್ಧ ಕೊಡುಗೆಯಿದೆ. ಆ ಹಿನ್ನೆಲೆಯಲ್ಲಿ ಬಿಜಾಪುರದ ಆಡು ಭಾಷೆಯ ಸೊಗಡು ಹುಲಗಬಾಳಿಯವರ ಹಾಸ್ಯ ಪ್ರಬಂಧಗಳಲ್ಲಿ ಕೆನೆಗಟ್ಟಿಕೊಂಡು ಬರುತ್ತದೆ. ಎರಡು ವರ್ಷಗಳ ಕೆಳಗೆ ಜಿಲ್ಲೆಗಳ ಪುನರ್ ವಿಂಗಡನೆ ಮಾಡಿದಾಗ ದೊಡ್ಡದಿದ್ದ ಜಿಲ್ಲೆಯನ್ನು ಹೆಚ್ಚಿಸಿ ಬಿಜಾಪುರ ಮತ್ತು ಬಾಗಲಕೋಟೆಗಳನ್ನಾಗಿ ಮಾಡಲಾಯಿತು. ಆಗ ಬಿಜಾಪುರದ ಕಳ್ಳು ಹರಿದುಕೊಂಡು ಬಾಗಲಕೋಟೆ ಜಿಲ್ಲೆಯೊಳಗೆ ಬಿದ್ದ ಈ 'ಗೊಲಗುಮ್ಮಜವಾಲೆ' ವಿಜಾಪುರಕ್ಕೆ ಗುಡ್‌ಬೈ ಹೇಳುತ್ತಲೇ 'ಇನ್ಮುಂದ ನಮ್ದು ಹೊಸ ಬಾಳೆ. ಮುಳುಗಡಿ ಅಂಜಿಕಿಯೊಳಗಿರೋ ಬಾಗಲಕೋಟ ಎತ್ತಿ ಹಿಡ್ಕೊಂಡು, ಸಂಸಾರ ಮಾಡಬೇಕಾಗೇದ' ಎಂದು ಹಳಹಳಿಸುತ್ತಾರೆ. ಸದರಿ ಲಲಿತ ಪ್ರಬಂಧ ಬಿಜಾಪುರದ ಆಡು ಮಾತಿನ ಧಾಟಿಯಲ್ಲಿ ಲಾವಣಿ ಹಾಡಿನ ಗುಂಗು ಹಿಡಿಸುತ್ತದೆ. ಮಾಹಿತಿ ಪೂರ್ಣವಾಗಿ ಹಾಸ್ಯ ಹೊಮ್ಮಿಸುತ್ತಲೇ ಅಂತಃಕರಣ ಕಲಕುತ್ತದೆ.

ಅನೇಕ ಕಾರಣಗಳಿಂದಾಗಿ 'ಗುಡ್‌ಬೈ ಬಿಜಾಪುರ' ಗಮನ ಸೆಳೆಯುವ ಕೃತಿ. ಕಾರ್ಡಂ ವಂದೇ ಜಗದೋದ್ಧಾರಕಂ, ಎಂಥ ಚಮತ್ಕಾರವಯ್ಯಾ ಈ ನಮಸ್ಕಾರ,

ಮಿ. ಕಂತುಪ್ರಿಯ ಕಲಿಯುಗ, ವಾಹ! ಜೇಬ್ ಕಾ ಜವಾಲ್ ಸಹೀ!!, ಸ್ಕೂನಿಜಂ, ಗುರುತಿಸಿಕೊಳ್ಳುವುದು - ಇಲ್ಲಿನ ಇನ್ನೂ ಅಪ್ಪು ಖುಷಿ ಕೊಡುವ ಪ್ರಬಂಧಗಳು.

ಈ ಸೀರಿಗರ ಹೊಡೆದ ನೀರೆಯರ ನುಡಿಸಲು ಬಾರದು ನೋಡಯ್ಯ... 'ಅತ್ತ ಇತ್ತ ನೋಡದಂತೆ ಎನ್ನವಳ ಅಂಧಕಳ ಮಾಡಯ್ಯಾ ತಂದೆ'; 'ಇಡೀ ಭಗವದ್ಗೀತೆಯನ್ನು ಕಾರ್ಡಿನಲ್ಲಿ ಬರೆದಂಥ ರಿ 'ಕಾರ್ಡ್' ಪ್ರಿಯರೂ ಇದ್ರಾಲ್ಲ'; 'ಈ ಕಲಿಯುಗವನ್ನು ಕಂತುಯುಗವೆಂದೂ ಕರೆಯುತ್ತಾರೆ. ಆ ಕಂತುಪಿತನಸುತರಿಗೆ ಕಂತುಪ್ರಿಯರೆಂದು ಕರೆಯಲಾಗುತ್ತದೆ. ನಮ್ಮಂಥ ಮಧ್ಯಮ ವರ್ಗದ ವಾಮನರು ಹೀಗೆ ತ್ರಿವಿಕ್ರಮರಾಗಿ ಬೆಳೆದು ಬರಲು ಈ ಕಂತುಪಿತನ ಕಟಾಕ್ಷ ಇರ್ಲೇಬೇಕು'. 'ಮನೆಯೊಳಗಿರ್ದು ಬೆಮರ್ತ ಪತಿರಾಯನಂತೆ' 'ಪಂಪಿಸು'ವುದಕ್ಕೆ 'ಚಮ್ಚಾಗಿರಿ' ಎಂಬ ಇನ್ನೊಂದು ಹೆಸರುಂಟು. ಇದನ್ನೇ ನಾನು 'ಸ್ಕೂನೀಜಂ' ಅಂತ ಕರೆದಿರೋದು; 'ಪೊಗಳ್ವ ನಾಲಿಗೆಯೊಂದಿದ್ದರೆ ಸಾಕು, ಪೊಗದಸ್ತಾಗಿ ಉಣ್ಣಬಹುದು', 'ಪಂಪ್ ಮಾಡಿಯೋ ಇಲ್ಲಾ ರಂಪ ಮಾಡಿಯೋ ಪ್ರಶಸ್ತಿ ಗಿಟ್ಟಿಸುವ ಪಂಪಣ್ಣರ ಕಾಲವಿದು' - ಇವು ಹುಲಗಬಾಳಿಯವರ ಶೈಲಿಗೆ ಸಾಂಪಲ್ಲುಗಳು.

ಕಡಿತದ ವ್ಯಾಪಾರ, ಸರಸು ಮುಖದಲ್ಲಿ ಮತ್ತೇ ಸಿರಿನಗೆ ಮೂಡಿತು, ಅನುಕಂಪಿಸಿದಳು, ಹುಕುಮಿಸಿದಳು, ಸಿಂಪೆಥೆಟಿಕಾಗಿದ್ದಳು; ಕಾಪಿಪ್ರಿಯ ವಿದ್ಯಾರ್ಥಿಗಳು, ಹರೋತ್ಸಾಹ, ವರ್ಗೀಯ ಜೀವಿಗಳು, ಪರಮನೆಂಟ, ಗ್ಲಾಸ್‌ಮೇಟ್, ತೀರ್ಥಾರಾಧನೆ, PP - ಪರರ ಫೋನು, ಬಂಡಾಯಿ ಇ.ಇ. ಪದಗಳ ಸೃಷ್ಟಿ ಕಚಗುಳಿಯಿಡುತ್ತದೆ. ಡಾ|| ಗುರುದೇವಿ ಹುಲೆಪ್ಪನವರಮಠ ಗುಡ್‌ಬೈಗೆ ಮುನ್ನುಡಿ ಬರೆಯುತ್ತ 'ಒಂದು ಶಬ್ದವನ್ನೂ ಅನಾವಶ್ಯಕವಾಗಿ ಬಳಸಿರದ ಅವರ Compact ಶೈಲಿಯಿಂದಾಗಿ ಈ ಹಾಸ್ಯ ಲೇಖನ ಸಂಗ್ರಹ ಬಿಲ್ಡಿಂಗು ಬಂಧುರವಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ನವಿರಾದ ಹಾಸ್ಯ, ತೀಕ್ಷ್ಣ ವಿಡಂಬನೆ, ಚತುರೋಕ್ತಿಗಳ ಹದವಾದ ಶೈಲಿಯಿಂದ ಹುಲಗಬಾಳಿಯವರ ಲೇಖನಿಗೆ ಭವಿಷ್ಯವಿದೆ. ಇನ್ನಷ್ಟು ಇನ್ನಷ್ಟು ಇವರ ಲೇಖನಿಯಿಂದ ಈ ತೆರನಾದ ಹಾಸ್ಯ ಪ್ರಬಂಧಗಳು ವೈವಿಧ್ಯಪೂರ್ಣವಾಗಿ ಬರಲಿ ಹಾಗೂ ಇವರ ಬರೆಯುವ ತಲಬು ನಿಲ್ಲದಿರಲೆಂಬುದು ನಮ್ಮ ಹಾರೈಕೆ.

- ಈರಪ್ಪ ಎಂ. ಕಂಬಳಿ

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR